ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 – 2023

ಮಂಗಳವಾರ, ಡಿಸೆಂಬರ್ 26, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 223 RNI : 27369/75

janathavani@mac.com
www.janathavani.com
08192 254736 91642 99999



**ಬಕ್ಕೇಶ್ವರ ಸ್ವಾಮಿ ಕಾರ್ತಿಕ** ದಾವಣಗೆರೆ ಚೌಕಿಪೇಟೆಯಲ್ಲಿರುವ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಕಡೇ ಕಾರ್ತಿಕೋತ್ಸವ ಸೋಮವಾರ ರಾತ್ರಿ ನೆರವೇರಿತು. ಇದಕ್ಕೂ ಮುನ್ನ ರಥದಲ್ಲಿ ನಂದಿವಾಹನ ಮಹೋತ್ಸವ ಜರುಗಿತು.

## ಸಾಲ ಮನ್ನಾ ಆಗಲು ಬರಗಾಲ ಬಯಸುವ ರೈತ ಎಂದ ಸಚಿವ

**ರಾಜ್ಯ ರಾಜಕೀಯದಲ್ಲಿ ಬಿರುಗಾಳಿ ಎಬ್ಬಿಸಿದ ಸಚಿವ ಶಿವಾನಂದ ಪಾಟೀಲ ಹೇಳಿಕೆ**

ಬೆಂಗಳೂರು, ಡಿ. 25 - ರೈತರು ಸಾಲ ಮನ್ನಾ ಆಗಲಿ ಎಂದು ಪದೇ ಪದೇ ಬರಗಾಲ ಬಯಸುತ್ತಾರೆ ಎಂಬ ಸಚಿವ ಶಿವಾನಂದ ಪಾಟೀಲ ಅವರ ಹೇಳಿಕೆ ರಾಜ್ಯ ರಾಜಕೀಯದಲ್ಲಿ ಬಿರುಗಾಳಿ ಎಬ್ಬಿಸಿದೆ.

ಪತ್ತಿನ ಸಹಕಾರಿ ಬ್ಯಾಂಕ್‌ನ ಸಮಾರಂಭವೊಂದರಲ್ಲಿ ಮಾತನಾಡಿದ ಸಚಿವರು, ತಾವು ಪಡೆದಿರುವ ಕೃಷಿ ಸಾಲವನ್ನು ಮನ್ನಾ ಮಾಡಿಕೊಳ್ಳಲು ಬರಗಾಲ ಬಯಸುತ್ತಾರೆ. ಇದು ಸರಿಯಲ್ಲ ಎಂದಿದ್ದರು.

ಕೃಷ್ಣಾ ನದಿ ನೀರು ಉಚಿತ ಇದೆ, ವಿದ್ಯುತ್ ಉಚಿತ ಇದೆ, ಮುಖ್ಯಮಂತ್ರಿಗಳು ಬೀಜ ಹಾಗೂ ಗೊಬ್ಬರ ಕೊಟ್ಟಿದ್ದಾರೆ. ರೈತರಿಗೆ ಮತ್ತೆ ಮತ್ತೆ ಬರಗಾಲ ಬರಲಿ ಎಂಬ ಒಂದೇ ಆಸೆ ಇರುತ್ತದೆ. ಬರ ಬಂದರೆ ಸಾಲ ಮನ್ನಾ ಆಗುತ್ತದೆ ಎಂಬ ಬಯಕೆ ಇರುತ್ತದೆ, ಹಾಗೆ ಬಯಸಬಾರದು. ನೀವು ಬೇಡ ಅಂದರೂ ನಾಲ್ಕು ವರ್ಷಕ್ಕೊಮ್ಮೆ ಬರ ಬರುತ್ತದೆ ಎಂದು ಸಚಿವರು ಹೇಳಿದ್ದರು.

ಹೆಚ್.ಡಿ.ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ, ಸಿದ್ದರಾಮಯ್ಯ ತಮ್ಮ ಆಡಳಿತ ಕಾಲದಲ್ಲಿ ರೈತರ ಸಾಲ ಮನ್ನಾ ಮಾಡಿದ್ದಾರೆ. ಈಗ ಬರಗಾಲ ಎದುರಾಗುತ್ತಿದ್ದಂತೆ, ಸಿದ್ದರಾಮಯ್ಯನವರು, ಸಹಕಾರಿ ಬ್ಯಾಂಕ್‌ಗಳಲ್ಲಿ ರೈತರು ಪಡೆದ ಕೃಷಿ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಿದ್ದಾರೆ.

ರೈತರು ಪರ್ಯಾಯ ಬೆಳೆಯನ್ನು ಅವಲಂಬಿಸಿದರೆ, ಇಂತಹ ಪರಿಸ್ಥಿತಿ ಬರುವುದಿಲ್ಲ ಎಂದು ಹೇಳಿದರು.

ಸಕ್ಕರೆ ಕಾರ್ಖಾನೆಗಳಿಗೆ ಎಥೆನಾಲ್ ಉತ್ಪಾದನೆ ಅವಕಾಶ ದೊರೆತ ನಂತರ ಸಕ್ಕರೆ ಉದ್ಯಮ ಮತ್ತು ಕಬ್ಬು ಬೆಳೆಗಾರರು ಬಲಿಷ್ಠರಾಗಿದ್ದಾರೆ, ಇದೇ ರೀತಿ ಎಲ್ಲರೂ ಪರ್ಯಾಯ ಮಾರ್ಗಗಳನ್ನು ಹುಡುಕಬೇಕು ಎಂದು ಸಲಹೆ ನೀಡಿದ್ದರು.

ಶಿವಾನಂದ ಅವರ ಈ ಹೇಳಿಕೆ ಹೊರಬರುತ್ತಿದ್ದಂತೆ, ಜೆಡಿಎಸ್ ರಾಜ್ಯಾಧ್ಯಕ್ಷ ಕುಮಾರಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನ ಸಭೆಯ ಪ್ರತಿಪಕ್ಷ ನಾಯಕ ಆರ್. ಅಶೋಕ್ ಹೇಳಿಕೆಯನ್ನು ಖಂಡಿಸಿದ್ದಾರೆ. (2ನೇ ಪುಟಕ್ಕೆ)

## ಪರಿಷತ್ ವಿಪಕ್ಷ ನಾಯಕರಾಗಿ ಕೋಟ ಶ್ರೀನಿವಾಸ ಪೂಜಾರಿ



ಬೆಂಗಳೂರು, ಡಿ. 25 - ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕರಾಗಿ ಕೋಟ ಶ್ರೀನಿವಾಸ ಪೂಜಾರಿ, ಉಪನಾಯಕರಾಗಿ ಸುನೀಲ್ ವಲ್ಯಾಪುರೆ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇಮಿಸಿದ್ದಾರೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡ ಅವರ ಸೂಚನೆ ಮೇರೆಗೆ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ವಿವಿಧ ಹುದ್ದೆಗಳಿಗೆ ನಿಯುಕ್ತಿ ಮಾಡಲಾಗಿದೆ ಎಂದು ಹೇಳಿಕೆಯಲ್ಲಿ ರಾಜ್ಯಾಧ್ಯಕ್ಷರು ತಿಳಿಸಿದ್ದಾರೆ. ವಿಧಾನ ಪರಿಷತ್ತಿನ ಮುಖ್ಯ ಸಚೇತಕ ಸ್ಥಾನಕ್ಕೆ ಎಸ್. ರವಿಕುಮಾರ್ ಅವರನ್ನು ನಿಯುಕ್ತಿ ಮಾಡಿದ್ದು, ವಿಧಾನಸಭೆಯ ವಿರೋಧ ಪಕ್ಷದ ಉಪನಾಯಕ ಸ್ಥಾನಕ್ಕೆ ಅರವಿಂದ ಬೆಲ್ಲದ್, ಮುಖ್ಯ ಸಚೇತಕ ಸ್ಥಾನಕ್ಕೆ ದೊಡ್ಡನಗೌಡ ಜಿ. ಪಾಟೀಲ್ ಅವರನ್ನು ನೇಮಿಸಲಾಗಿದೆ.

## ರಾಜ್ಯದಲ್ಲಿ 35 ಜೆಎನ್1 ಸೋಂಕು ಪ್ರಕರಣ

ಬೆಂಗಳೂರು, ಡಿ. 25 – ರಾಜ್ಯದಲ್ಲಿ ಇದುವರೆಗೂ ಜೆಎನ್.1 ಕುಲಾಂತರಿಯ 35 ಕೊರೊನಾ ಪ್ರಕರಣಗಳು ಪತ್ತೆಯಾಗಿವೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ಕೊರೊನಾ ಸೋಂಕು ಕಂಡು ಬಂದ ಕೆಲವರು ಸಹ ಅಸ್ವಸ್ಥತೆಗಳಿಂದ ಮೃತಪಟ್ಟಿದ್ದಾರೆ. ಅವರಲ್ಲೂ ಜೆಎನ್.1 ಸೋಂಕಿರುವುದು ಕಂಡು ಬಂದಿದೆ ಎಂದವರು ಹೇಳಿದ್ದಾರೆ. ಕೊರೊನಾದ ಹೊಸ ಉಪತಳಿಯ ಹರಡುವಿಕೆ ಅಚ್ಚರಿದಾಯಕ ಇಲ್ಲವೇ ಹಠಾತ್ ಬೆಳವಣಿಗೆಯೇನೂ ಅಲ್ಲ. ಜನರು ಚಿಂತೆಗೀಡಾಗಬಾರದು, ಆದರೆ ಎಚ್ಚರವಾಗಿರಬೇಕು ಎಂದು ಸಚಿವರು ಹೇಳಿದ್ದಾರೆ.

ಕೊರೊನಾ ಸಂಬಂಧ ಉಪ ಸಮಿತಿಯನ್ನು ರಚಿಸಲಾಗಿದೆ. ಸಮಿತಿ ನಾಳೆ ಸಭೆ ನಡೆಸಲಿದ್ದು, ನಂತರ ವಿವರಗಳನ್ನು ಬಹಿರಂಗ ಪಡಿಸ (2ನೇ ಪುಟಕ್ಕೆ)

## ರಾಜ್ಯದಲ್ಲಿ 125 ಸೋಂಕಿತರು, 3 ಸಾವು

ಬೆಂಗಳೂರು, ಡಿ. 25 – ರಾಜ್ಯದಲ್ಲಿ 125 ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ ಹಾಗೂ ಸೋಂಕಿಗೆ ಸಿಲುಕಿದ್ದ ಮೂವರು ಸಾವನ್ನಪ್ಪಿದ್ದಾರೆ ಎಂದು ರಾಜ್ಯ ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇದರೊಂದಿಗೆ ಸಕ್ರಿಯ ಸೋಂಕಿತರ ಸಂಖ್ಯೆ 436ಕ್ಕೆ ತಲುಪಿದೆ. ಇದೇ ದಿನ 30 ರೋಗಿಗಳು ಗುಣವಾಗಿ ಬಿಡುಗಡೆಯಾಗಿದ್ದಾರೆ. ರಾಜ್ಯದಲ್ಲಿ 3,155 ಪರೀಕ್ಷೆಗಳನ್ನು ಮಾಡಲಾಗಿದೆ. ಪಾಸಿಟಿವ್ ಬರುವ ದರ ಶೇ.3.96 ಹಾಗೂ ಸಾವಿನ ದರ ಶೇ.2.4ರಷ್ಟಿದೆ.

## ರಾಜಸ್ಥಾನಕ್ಕೆ ಬಂದ ಮಧ್ಯಪ್ರದೇಶದ ಚೀತಾ

ಶಿಯೋಪುರ, ಡಿ. 25 – ಇತ್ತೀಚೆಗಷ್ಟೇ ಅರಣ್ಯದಲ್ಲಿ ಬಿಡಲಾಗಿದ್ದ ಚೀತಾ ಒಂದು ಮಧ್ಯಪ್ರದೇಶದ ಕುನೋ ರಾಷ್ಟ್ರೀಯ ಉದ್ಯಾನದಿಂದ ಹೊರ ಬಂದು ರಾಜಸ್ಥಾನದ ಬರನ್ ಜಿಲ್ಲೆ ಪ್ರವೇಶಿಸಿತ್ತು. ಅದಕ್ಕೆ ಅರಿವಳಿಕೆ ಮದ್ದು ನೀಡಿ ವಾಪಸ್ ತರಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಅಗ್ನಿ ಎಂಬ ಹೆಸರಿನ ಚೀತಾವನ್ನು ವಾಯು ಹೆಸರಿನ ಇನ್ನೊಂದು ಚೀತಾ ಜೊತೆಗೆ ಪರೊಂಡ್ ಅರಣ್ಯ ವಲಯದಲ್ಲಿ ಬಿಡಲಾಗಿತ್ತು. ಇದು ಕುನ್ಹೋ ರಾಷ್ಟ್ರೀಯ ಉದ್ಯಾನದ ಭಾಗವಾಗಿದೆ.

# ಹೈಕಮಾಂಡ್ ಮೇಲೆ ಡಿಸಿಎಂ ಸ್ಥಾನಕ್ಕೆ ಒತ್ತಡ

**ಪಂಚರಾಜ್ಯಗಳ ಚುನಾವಣೆ ಮುಗಿಯುತ್ತಿದ್ದಂತೆ ಮತ್ತೆ ಮುನ್ನೆಲೆಗೆ ಡಿಸಿಎಂ ವಿಚಾರ**

ಬೆಂಗಳೂರು, ಡಿ. 25 - ಪಂಚರಾಜ್ಯಗಳ ವಿಧಾನಸಭಾ ಚುನಾವಣೆ ಮುಗಿಯುತ್ತಿದ್ದಂತೆ ಸಿದ್ದರಾಮಯ್ಯ ಸಂಪುಟವನ್ನು ಪುನರ್ ರಚಿಸಿ ಹೊಸದಾಗಿ ಮೂವರು ಉಪಮುಖ್ಯಮಂತ್ರಿಗಳಿಗೆ ಅವಕಾಶ ಮಾಡಿಕೊಡುವಂತೆ ಕಾಂಗ್ರೆಸ್ ವರಿಷ್ಠರ ಮೇಲೆ ಮತ್ತೆ ಒತ್ತಡ ಹಾಕಲಾಗುತ್ತಿದೆ.

ಚುನಾವಣೆ ಸಮಯದಲ್ಲಿ ಮೌನವಾಗಿದ್ದ ಕೆಲವು ಮುಖಂಡರು ಮತ್ತೆ ಉಪಮುಖ್ಯಮಂತ್ರಿ ನೇಮಕಾತಿಯನ್ನು ಮುನ್ನೆಲೆಗೆ ತಂದಿದ್ದಾರೆ.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಮ್ಮ ನಿಲುವನ್ನು ಮುಂದಿಟ್ಟುಕೊಂಡು ವರಿಷ್ಠರ ಮೇಲೆ ಒತ್ತಡ ಹೇರುತ್ತಿದ್ದು ಇದಕ್ಕೆ ಕಾಂಗ್ರೆಸ್‌ನ ಕೆಲವು ಶಾಸಕರು ಬೆನ್ನೆಲುಬಾಗಿ ನಿಂತಿದ್ದಾರೆ.

ಮುಂಬರುವ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪರಿಶಿಷ್ಟ ಜಾತಿ, ವರ್ಗ ಹಾಗೂ ಲಿಂಗಾಯತ ಸಮುದಾಯದ ತಲಾ ಒಬ್ಬರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಿ ಎಂದು ವರಿಷ್ಠರ ಮೇಲೆ ಸತೀಶ್ ಒತ್ತಡ ಹೇರಿದ್ದಾರೆ.

ತಮ್ಮ ಆಪ್ತರ ಜೊತೆಗೂಡಿ ಕಳೆದ ಕೆಲವು ದಿನಗಳಿಂದ ದೆಹಲಿಯಲ್ಲಿ ಬಿಡಾರ ಹೂಡಿದ್ದ ಸತೀಶ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಸೇರಿದಂತೆ ಕೆಲವು ಮುಖಂಡರನ್ನು ಭೇಟಿ ಮಾಡಿ ತಮಗೆ ಸಚಿವ ಸ್ಥಾನದಿಂದ ಬಡ್ತಿ ನೀಡುವಂತೆ ಮನವಿ ಮಾಡಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ನೀವು ನೀಡಿರುವ ಗುರಿ ಮುಟ್ಟಲು ಕರ್ನಾಟಕದಲ್ಲಿ ಜಾತಿ ಸಮೀಕರಣ ಅಗತ್ಯವಿದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಗ್ಯಾರಂಟಿ ಯೋಜನೆಗಳ ಭರವಸೆ ಜೊತೆಗೆ ಜಾತಿಗಳ ಸಮೀಕರಣದಿಂದ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದಿದ್ದೇವೆ.

ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗಳಿಸಬೇಕಾದರೆ ಈ ಮೂರೂ ವರ್ಗಗಳಿಗೆ ಸೇರಿದ ಹಿರಿಯ ಶಾಸಕರಲ್ಲಿ ತಲಾ ಒಬ್ಬರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಿ ಎಂಬ ಬೇಡಿಕೆ ಮುಂದಿಟ್ಟಿದ್ದಾರೆ. ಇದರಿಂದ ನಮಗೆ ಮತ ಗಳಿಕೆ ಹೆಚ್ಚಿ 28 ರಲ್ಲಿ ಕನಿಷ್ಠ 20 (2ನೇ ಪುಟಕ್ಕೆ)



**ವೆಂಕಟೇಶ್ವರ ಸ್ವಾಮಿ ಬ್ರಹ್ಮರಥೋತ್ಸವ** ದಾವಣಗೆರೆ ಬೇತೂರು ರಸ್ತೆಯಲ್ಲಿರುವ ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಸೋಮವಾರ ಮಧ್ಯಾಹ್ನ ಬ್ರಹ್ಮರಥೋತ್ಸವ ಸಂಭ್ರಮದಿಂದ ನೆರವೇರಿತು.



**ಕ್ರಿಸ್‌ಮಸ್** ಹಿನ್ನೆಲೆಯಲ್ಲಿ ದಾವಣಗೆರೆ ಪಿ.ಜೆ. ಬಡಾವಣೆಯ ಸಂತ ತೋಮಸರ ದೇವಾಲಯದಲ್ಲಿ ಮೇಣದ ಬತ್ತಿ ಬೆಳಗಿ ಏಸುವನ್ನು ಪ್ರಾರ್ಥಿಸಲಾಯಿತು.

# ಕ್ರಿಸ್‌ಮಸ್, ಸರ್ವಧರ್ಮ ಸಮ್ಮೇಳನದಿಂದ ಸಾಮರಸ್ಯ

**ಜಗಳೂರು ಶಾಸಕ ಬಿ.ದೇವೇಂದ್ರಪ್ಪ**



ಜಗಳೂರು, ಡಿ. 25 - ಆಧುನಿಕ ಸಮಾಜದಲ್ಲಿ ಸಾಮರಸ್ಯಕಣ್ಮರೆಯಾಗುತ್ತಿರುವ ಇಂದಿನ ದಿನಗಳಲ್ಲಿ ಪ್ರೇರಣಾ ಟ್ರಸ್ಟ್ ತಾಲ್ಲೂಕಿನಲ್ಲಿ ಸಮಾಜಮುಖಿ ಕಾರ್ಯಕ್ರಮಗಳ ಜೊತೆಗೆ ಪ್ರತಿವರ್ಷ ಕ್ರಿಸ್‌ಮಸ್ ಹಬ್ಬದಂದು ಸರ್ವಧರ್ಮ ಸಮ್ಮೇಳನ ಆಯೋಜಿಸಿ ಸಾಮರಸ್ಯ ಕಾಪಾಡುತ್ತಿರುವುದು ಶ್ಲ್ಯಾಘನೀಯ ಎಂದು ಶಾಸಕ ಬಿ.ದೇವೇಂದ್ರಪ್ಪ ತಿಳಿಸಿದರು.

ಪಟ್ಟಣದ ಪ್ರೇರಣಾ ಚರ್ಚ್ ಆವರಣದಲ್ಲಿ ಪ್ರೇರಣಾ ಸಮಾಜ ಸೇವಾ ಟ್ರಸ್ಟ್ (ರಿ) ವತಿಯಿಂದ ಕ್ರಿಸ್ತ ಜಯಂತಿ-2023ರ ಅಂಗವಾಗಿ ಹಮ್ಮಿಕೊಂಡಿದ್ದ ಸರ್ವಧರ್ಮ ಸಮ್ಮೇಳನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿಧೇಯತೆ, ಕರುಣೆಯ ಮೂಲಕ ವಿಶ್ವಕ್ಕೆ ಮಾನವ ಧರ್ಮ ಸಾರಿದ ಯೇಸು ಕ್ರಿಸ್ತರ ಸಂದೇಶ ಹಾಗೂ ಮೌಲ್ಯಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಎಲ್ಲಾ ಧರ್ಮದವರ ರಕ್ತದ ಬಣ್ಣ ಒಂದೇ ಆಗಿದ್ದು, ಟಿ.ವಿ., ಮೊಬೈಲ್, ದುಶ್ಚಟಗಳ ದಾಸರಾಗದೆ, ಪ್ರತಿಯೊಬ್ಬರೂ ಆಯಾ ಧರ್ಮಗಳ ದೇವರುಗಳ ದಾಸರಾಗಿ ಉಪಾಸನೆ ನಡೆಸಿದರೆ ಮಾತ್ರ ಅರಿಷಡ್ವರ್ಗಗಳಿಗೆ ಹುಟ್ಟು-ಸಾವಿಗೆ ಮುಕ್ತಿ ಲಭಿಸುವುದು ಎಂದು ಅಧ್ಯಾತ್ಮಿಕತೆಯ ಸಾರವನ್ನು ವಚನಗಳೊಂದಿಗೆ ಉದಾಹರಿಸಿದರು.

ಆವರಗೊಳ್ಳ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಮತಾಂಧರಿಂದ ದೈಹಿಕ, ಮಾನಸಿಕ, ಹಿಂಸೆಗಳನ್ನು ಸಹಿಸಿಕೊಂಡು ಜಗಜ್ಯೋತಿಯಾಗಿರುವ ಯೇಸು ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂದು ಸಾರಿದರು ಎಂದರು.

ಪ್ರತಿಯೊಂದು ಧರ್ಮ ಜಾತ್ಯತೀತ, ಧರ್ಮಾತೀತವಾಗಿದ್ದು. ಧಾರ್ಮಿಕ ನೆಲೆಗಟ್ಟಿನ ಮೇಲೆ ಅವುಗಳನ್ನು ಆರಾಧಿಸುವ ಉದಾರತೆ, ವೈಶಾಲ್ಯತೆಯ ಮನೋಭಾವ ಬೆಳೆಸಿಕೊಳ್ಳಬೇಕಿದೆ. ಸ್ವಧರ್ಮ ನಿಷ್ಠೆ, ಪರಧರ್ಮ ಸಹಿಷ್ಣುತೆಯಿಂದ ಐಕ್ಯತಾ ಭಾವನೆ ಸಾರಬೇಕಿದೆ ಎಂದರು.

ಪ್ರವಾದಿ, ಸಾಧು, ಸಂತರು ಅಜ್ಞಾನದ ಕತ್ತಲನ್ನು ತೊಲಗಿಸಿ ಜ್ಞಾನದ ಬೆಳಕನ್ನು ಸಮಾಜ ದಲ್ಲಿ ಉಳಿಸಿ ಹೋಗಿದ್ದಾರೆ. ಆಚಾರ-ವಿಚಾರದಲ್ಲಿ ಸನ್ಮಾರ್ಗದಿಂದ ನಡೆಯಬೇಕು. ಮನುಷ್ಯ ಅಸೂಯೆ, ಸ್ವಾರ್ಥ ತೊರೆದು ಲೋಕ ಕಲ್ಯಾಣಕ್ಕಾಗಿ ಪರೋಪಕಾರಿಯಾಗಿ ಪುಣ್ಯ ಗಳಿಸಬೇಕು ಎಂದು ಶ್ರೀಗಳು ಸಲಹೆ ನೀಡಿದರು.

ಕುಂದಾಪುರ ಹಳವಳ್ಳಿಯ ಜೀರ್ಫ್ ಇಮಾಂ ಖಿಲ್ ರಿಯಾ ಮಸ್ಜೀದ್ ನ ಮೌಲಾನಾ ಅಬೂಬ್ಕರ್ ಸಿದ್ದಿಕ್ ಪಾಳೀಲಿ ಅಲ್ ಹಿಕಮಿ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನದ ಆಶಯದಂತೆ ಭಾರತೀಯರಾದ ನಾವು ವೈವಿಧ್ಯತೆಯಲ್ಲಿ ಏಕತೆ ಉಳಿಸಬೇಕಿದೆ. ಕೆಲವರು ದೇಶದಲ್ಲಿ ರಾಜಕೀಯ ಹಿತಾಸಕ್ತಿಗಾಗಿ ವಿನಾಕಾರಣ ಧರ್ಮಾಂಧತೆ, ಕೋಮು ಗಲಭೆ ಸೃಷ್ಠಿಸುತ್ತಿದ್ದಾರೆ. ಇದರಿಂದ (2ನೇ ಪುಟಕ್ಕೆ)

SET
(Self Evaluation Test)
Scan for SET
1st PUC - 2024
ADMISSION cum SCHOLARSHIP
Scan QR Code for SET
Scan For Brochure
CBSE, ICSE Offline
Test on 07-01-2024
STATE Offline
Test on 21-01-2024
Time : 10 am to 12 noon
NEET-2022 NEET MARKS 705/720 · STATE 1st · NEET-2020 NEET MARKS 703/720 · All India Rank 3rd · NEET-2023 NEET MARKS 680/720 · DIST. 1st · PU-2023 PU MARKS 592/600
10 IIT STUDENTS · 18 NIT STUDENTS · 8 IIIT STUDENTS · 9 AIIMS STUDENTS
300+ Free Medical seats in NEET - 2023
SIR M V GROUP OF INSTITUTIONS
• SIR MV PU COLLEGE, Near Govt. ITI College, Hadadi Road, Davangere-577 005. Ph: 08192-261200, 92433 12223, 87221 41400
• Sri Vidyabharathi Pre-University (IND) College, Kuvempu Nagara Extn., SUDA Layout, 'A' Block, Shivamogga-4 Ph: 90351 41142, 96065 58762, 96065 54836
• SATYAM PU COLLEGE, After 2nd Canal, Kappagal Village Road, Ballari - 583 103 Ph: 81977 64018, 99453 77965

**ಶಾಮನೂರು ಎಸ್. ರಾಜು ನಿಧನ**



ದಾವಣಗೆರೆ ಸಿಟಿ ಶಾಮನೂರು ವಾಸಿ ಶ್ರೀಮತಿ ಬಿ. ಸುಜಾತ ಇವರ ಪತಿ **ಶ್ರೀ ಎಸ್. ರಾಜು** ಇವರು ದಿನಾಂಕ 25.12.2023ರ ಸೋಮವಾರ ಮಧ್ಯಾಹ್ನ 03.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 65 ವರ್ಷ ವಯಸ್ಸಾಗಿತ್ತು. ಪತ್ನಿ, ಸಹೋದರ, ಸಹೋದರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 26.12.2023ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಗ್ಲಾಸ್ ಹೌಸ್ ಹತ್ತಿರವಿರುವ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : ಶ್ರೀಮತಿ ಬಿ. ಸುಜಾತ, ಬಿಂದಪ್ಪ ಶ್ರೀಮತಿ ಸುನಂದಮ್ಮ ಮತ್ತು ಮಕ್ಕಳು, ಅಳಿಯಂದಿರು. ಶ್ರೀ ಎಸ್. ಗುರುಮೂರ್ತೆಪ್ಪ ಮತ್ತು ಸಹೋದರಿಯರು, ಅಳಿಯಂದಿರು, ಬಿಂದಪ್ಪ ವಂಶಸ್ಥರು ಹಾಗೂ ಬಂಧು ಮಿತ್ರರು. ಮೊ : 99868 14843, 88614 83891

## ಸಂಕ್ಷಿಪ್ತ ಸುದ್ದಿ

**ಇರಾನ್ ಕಡೆಯಿಂದ ಡ್ರೋನ್ ದಾಳಿ : ಅಮೆರಿಕ**

ನವದೆಹಲಿ : ಪಶ್ಚಿಮ ಕರಾವಳಿಯ ಅರಬ್ಬೀ ಸಮುದ್ರದಲ್ಲಿ ಭಾರತಕ್ಕೆ ಬರುತ್ತಿದ್ದ ಸರಕು ಸಾಗಣೆ ಹಡಗಿನ ಮೇಲೆ ಇರಾನ್ ಕಡೆಯಿಂದ ಡ್ರೋನ್ ದಾಳಿ ನಡೆಸಲಾಗಿತ್ತು ಎಂದು ಅಮೆರಿಕ ತಿಳಿಸಿದೆ. ಮುಂಬೈಗೆ ಬರಬೇಕಿದ್ದ ಈ ಹಡಗಿನ ಮೇಲೆ ನಡೆಸಲಾದ ದಾಳಿಯ ಬಗ್ಗೆ ಭಾರತದ ನೌಕಾ ದಳ ತನಿಖೆ ಆರಂಭಿಸಿದೆ. ಎಂವಿ ಚೆಮ್ ಪ್ಲುಟೋ ಹಡಗಿನ ಮೇಲೆ ದಾಳಿ ನಡೆಸಲಾಗಿತ್ತು. ಈ ಹಡಗಿನಲ್ಲಿ ಕಚ್ಚಾ ತೈಲವನ್ನು ಸೌದಿ ಅರೋಬಿಯಾದಿಂದ ನವ ಮಂಗಳೂರು ಬಂದರಿಗೆ ರವಾನಿಸಲಾಗುತ್ತಿತ್ತು.

**ಪ್ರಧಾನಿ ಅವಹೇಳನದ ಹೇಳಿಕೆ : ಮಾಜಿ ಸಂಸದನ ವಿರುದ್ಧ ದೂರು**

ಅಮ್ರೇಲಿ : ಗುಜರಾತ್‌ನ ಅಮ್ರೇಲಿ ಜಿಲ್ಲೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ವಿರುದ್ಧ ಕಾಂಗ್ರೆಸ್ ಮಾಜಿ ಸಂಸದ ವಿರ್ಜಿ ಥುಮ್ಮರ್ ತೇಜೋವಧೆ ಮಾಡುವ ಹೇಳಿಕೆ ನೀಡಿದ್ದಾರೆ ಎಂದು ಸಂಜ್ಞೆಯೇತರ ಪ್ರಕರಣ ದಾಖಲಿಸಲಾಗಿದೆ. ಪ್ರಧಾನಿಯನ್ನು 'ದಲ್ಲಾಳಿ' ಎಂದು ಥುಮ್ಮರ್ ಹೇಳಿದ್ದಾರೆ ಎಂದು ದೂರು ದಾಖಲಿಸಲಾಗಿದೆ.

**ಕ್ರಿಶ್ಚಿಯನ್ ಸಮುದಾಯದ ಸೇವೆಗೆ ಪ್ರಧಾನಿ ಮೆಚ್ಚುಗೆ**

ನವದೆಹಲಿ : ಕ್ರಿಶ್ಚಿಯನ್ ಸಮುದಾಯ ಸಮಾಜ ಮುನ್ನಡೆಸುವಲ್ಲಿ ತನ್ನ ಪಾತ್ರ ವಹಿಸಿದೆ ಹಾಗೂ ಸೇವಾ ಮನೋಭಾವನೆಯಿಂದ ಕಾರ್ಯನಿರ್ವಹಿಸಿದೆ. ಸಮುದಾಯದ ಸೇವೆಯ ಬಗ್ಗೆ ದೇಶಕ್ಕೆ ಹೆಮ್ಮೆ ಇದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಕ್ರಿಸ್‌ಮಸ್ ಸಂದೇಶದಲ್ಲಿ ತಿಳಿಸಿದ್ದಾರೆ.

**ರಾಜಸ್ಥಾನ ಸಂಪುಟ ರಚನೆ ವಿಳಂಬಕ್ಕೆ ಗೆಹ್ಲೋಟ್ ತರಾಟೆ**

ಜೈಪುರ : ರಾಜಸ್ಥಾನದಲ್ಲಿ ಬಿಜೆಪಿ ಸರ್ಕಾರದ ಸಂಪುಟ ರಚನೆ ವಿಳಂಬವಾಗಿದೆ. ಇದರಿಂದಾಗಿ ಆಡಳಿತ ಯಂತ್ರ ಸ್ಥಗಿತವಾಗಿದ್ದು, ಜನರಲ್ಲಿ ನಿರಾಸೆ ಉಂಟಾಗಿದೆ. ಡಿಸೆಂಬರ್ 3ರಂದು ಬಿಜೆಪಿಗೆ ಸ್ಪಷ್ಟ ಜನಾದೇಶ ದೊರೆತಿತ್ತು. ಆದರೆ, 22 ದಿನಗಳು ಉರುಳಿದರೂ ಸಂಪುಟ ರಚನೆಯಾಗಿಲ್ಲ ಎಂದು ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಟೀಕಿಸಿದ್ದಾರೆ. ಒಂದೆರಡು ದಿನಗಳಲ್ಲೇ ಸಂಪುಟ ರಚನೆಯಾಗುವ ನಿರೀಕ್ಷೆ ಇದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

**ಮೊದಲ ಅಮೃತ್ ಭಾರತ್ ರೈಲಿಗೆ ಪ್ರಧಾನಿಯಿಂದ ಚಾಲನೆ**

ನವದೆಹಲಿ : ಪುಶ್ - ಪುಲ್ ತಂತ್ರಜ್ಞಾನದ ಮೊದಲ ಅಮೃತ್ ಭಾರತ್ ರೈಲಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಶೀಘ್ರದಲ್ಲೇ ಅಯೋಧ್ಯೆಯಲ್ಲಿ ಚಾಲನೆ ನೀಡಲಿದ್ದಾರೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. ಈ ರೈಲನ್ನು ವೈಷ್ಣವ್ ಪರಿಶೀಲಿಸಿದ್ದು, ಪುಶ್ - ಪುಲ್ ತಂತ್ರಜ್ಞಾನ ಪ್ರಯಾಣಿಕರಿಗೆ ಆರಾಮದಾಯಕವಾಗಿದೆ. ಮೊದಲ ರೈಲು ದೆಹಲಿ ಹಾಗೂ ಕೋಲ್ಕೊತಾ ನಡುವೆ ಸಂಚರಿಸಲಿದೆ. ಇದರ ಅವಧಿ ಸಾಂಪ್ರದಾಯಿಕ ರೈಲಿಗಿಂತ ಎರಡು ಗಂಟೆ ಕಡಿಮೆ ಎಂದಿದ್ದಾರೆ.

**ಮಧ್ಯಪ್ರದೇಶದಲ್ಲಿ ತಬಲಾ ಕಲಾವಿದರಿಂದ ಗಿನ್ನಿಸ್ ದಾಖಲೆ**

ಭೂಪಾಲ್ : ಮಧ್ಯ ಪ್ರದೇಶದ ಗ್ವಾಲಿಯರ್‌ನಲ್ಲಿ ಆಯೋಜಿಸಲಾಗಿದ್ದ 99ನೇ ಅಂತರರಾಷ್ಟ್ರೀಯ ತಾನ್‌ಸೇನ್ ಸಮಾರಂಭದಲ್ಲಿ 1,300 ತಬಲಾ ಕಲಾವಿದರು ಏಕಕಾಲದಲ್ಲಿ ತಬಲಾ ಬಾರಿಸುವ ಮೂಲಕ ಗಿನ್ನಿಸ್ ದಾಖಲೆ ಬರೆದಿದ್ದಾರೆ. ಮುಖ್ಯಮಂತ್ರಿ ಮೋಹನ್ ಯಾದವ್ ಅವರಿಗೆ ದಾಖಲೆಯ ಪ್ರಮಾಣ ಪತ್ರವನ್ನು ಹಸ್ತಾಂತರಿಸಲಾಗಿದೆ.

**ದೂರಸಂಪರ್ಕ ಮಸೂದೆಗೆ ರಾಷ್ಟ್ರಪತಿ ಒಪ್ಪಿಗೆ**

ನವದೆಹಲಿ : ಸಂಸತ್ತಿನಿಂದ ಅನುಮೋದನೆಗೊಂಡಿದ್ದ ದೂರಸಂಪರ್ಕ ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅನುಮೋದನೆ ನೀಡಿದ್ದಾರೆ. ಇದು ಶತಮಾನದ ಹಳೆಯ ಟೆಲಿಕಾಂ ಕಾಯ್ದೆಗೆ ತೆರೆ ಎಳೆದಿದೆ. ಈ ಕಾಯ್ದೆ ಹೂಡಿಕೆದಾರರ ಸ್ನೇಹಿಯಾಗಿದೆ.



## ಆನೆಕೊಂಡದಲ್ಲಿ ಇಂದು ಶ್ರೀ ಬಸವೇಶ್ವರ ಸ್ವಾಮಿ ಕಾರ್ತಿಕೋತ್ಸವ

ದಾವಣಗೆರೆ ಸಮೀಪದ ಶ್ರೀ ಕ್ಷೇತ್ರ ಆನೆಕೊಂಡ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಇಂದು ರಾತ್ರಿ 8 ಗಂಟೆಗೆ ಕಾರ್ತಿಕ ದೀಪೋತ್ಸವ ನಡೆಯಲಿದೆ ಎಂದು ದೇವಸ್ಥಾನದ ಕನ್ವೀನರ್ ಗೌಡ್ರ ಅಜ್ಜಪ್ಪ ತಿಳಿಸಿದ್ದಾರೆ.

# ಯಾಂತ್ರೀಕೃತ ಕೃಷಿ ಪದ್ಧತಿ ಅಳವಡಿಕೆ ಅನಿವಾರ್ಯ



## ಹರಪನಹಳ್ಳಿಯ ಕಾರ್ಯಕ್ರಮದಲ್ಲಿ ಶಾಸಕರಾದ ಲತಾ ಮಲ್ಲಿಕಾರ್ಜುನ್

ಹರಪನಹಳ್ಳಿ, ಡಿ. 25 - ಕೃಷಿ ಕಾರ್ಮಿಕರ ಕೊರತೆಯಿಂದ ರೈತರು ಯಾತ್ರೀಕೃತ ಕೃಷಿ ಪದ್ದತಿ ಅಳವಡಿಸಿಕೊಳ್ಳುವುದು ಅನಿವಾರ್ಯವಾಗಿದೆ ಎಂದು ಶಾಸಕರಾದ ಶ್ರೀಮತಿ ಎಂ.ಪಿ.ಲತಾ ಮಲ್ಲಿಕಾರ್ಜುನ ಹೇಳಿದರು.

ಪಟ್ಟಣದ ಕೊಟ್ಟೂರು ರಸ್ತೆಯ ಇಂಡಿಯನ್ ಪೆಟ್ರೋಲಿಯಂ ಬಂಕ್ ಬಳಿ ಇಂಡಿಯನ್ ಮೋಟಾರ್ಸ್ ವತಿಯಿಂದ ಶಕ್ತಿ ಮಾನ್ ಕೃಷಿ ಪರಿಕರಗಳ ಮಳಿಗೆ ಉದ್ಘಾಟಿಸಿ ಅವರು ಮಾತನಾಡಿದರು.

ರೈತರು ಕೂಲಿ ಆಳುಗಳ ಸಮಸ್ಯೆ ನೀಗಿಸಲು ಯಂತ್ರದ ಮೊರೆ ಹೋಗಿದ್ದಾರೆ. ಕೆಸರು ಗದ್ದೆ ಮಾಡಿಕೊಳ್ಳುವುದರಿಂದ ಹಿಡಿದು ಕೊಯ್ಲು ಮಾಡಿ ಮೆಕ್ಕೆ ಜೋಳ, ರಾಗಿ, ಜೋಳ ಸೇರಿದಂತೆ ವಿವಿಧ ತರಕಾರಿ ಬೆಳೆಗಳು ಮನೆಗೆ ತರುವವರೆಗೆ ಪ್ರತಿಯೊಂದು ಕೆಲಸಕ್ಕೂ ಕೂಲಿ ಕಾರ್ಮಿಕರು ಬೇಕೇ ಬೇಕು. ಆದರೆ ಸಮಯಕ್ಕೆ ಸರಿಯಾಗಿ ಸಿಗೋದಿಲ್ಲ. ಹೀಗಾಗಿ ರೈತರು ಈ ಯಾಂತ್ರೀಕೃತ ಪದ್ಧತಿ ಅಳವಡಿಸಿಕೊಳ್ಳುವುದು ಅನಿವಾರ್ಯವಾಗಿದೆ ಎಂದರು.

ರೈತರು ಅತಿಯಾದ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕ ಬಳಕೆಯಿಂದ ಖರ್ಚು ಹೆಚ್ಚಾಗಿ ಆದಾಯ ಕಡಿಮೆಯಾಗುತ್ತಿದ್ದು, ಅಧುನಿಕ ಕೃಷಿ ಬಳಕೆ ಹಾಗೂ ಸಾವಯವ ಗೊಬ್ಬರ ಬಳಕೆ ಮಾಡುವ ಮೂಲಕ ಕಡಿಮೆ ಖರ್ಚಿನಲ್ಲಿ ಅಧಿಕ ಇಳುವರಿ ಪಡೆಯಬೇಕು ಎಂದರು.

ಪುರಸಭೆ ಸದಸ್ಯ ಡಿ.ಅಬ್ದುಲ್ ರಹಿಮಾನ್ ಸಾಹೇಬ್ ಮಾತನಾಡಿ, ಇತ್ತಿಚಿಗೆ ರೈತರು ಹಲವಾರು ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಈ ಸಮಸ್ಯೆಗಳು ಪರೋಕ್ಷವಾಗಿ ಮತ್ತು ನೇರವಾಗಿ ರೈತನ ಜೀವನದ ಮೇಲೆ ಪರಿಣಾಮ ಬೀರುತ್ತವೆ. ಇದಲ್ಲದೆ, ಕೃಷಿ ಪದ್ಧತಿಗಳು ಮತ್ತು ಕೃಷಿಯ ಇತರೆ ಅಂಶಗಳು ಸಂಪನ್ಮೂಲಗಳು ಮತ್ತು ಸಮಯವನ್ನು ತೆಗೆದುಕೊಳ್ಳಬಹುದು. ಉಳುವುದು, ನೆಲ ಹದಮಾಡುವುದು, ಬಿತ್ತನೆ, ಕಳೆಕಿತ್ತು ಏರು ಕಟ್ಟುವುದು, ಕುಯಿಲು, ಒಕ್ಕಣೆ ಮಾಡುವುದು ಇವು ವಿವಿಧ ಹಂತಗಳ ಕೃಷಿ ಕೆಲಸಗಳಾಗಿವೆ ಎಂದರು.

ಪುರಸಭೆ ಮಾಜಿ ಅಧ್ಯಕ್ಷ ಮಂಜುನಾಥ ಇಜಂತಕರ್ ಮಾತನಾಡಿ, ಆಧುನಿಕ ಕೃಷಿ ಪದ್ಧತಿಗಳಲ್ಲಿ ಕೃಷಿ ಉಪಕರಣಗಳು ಪ್ರಮುಖ ಪಾತ್ರವಹಿಸುತ್ತವೆ. ಅವುಗಳನ್ನು ವಾಣಿಜ್ಯ ಕೃಷಿ ಪದ್ಧತಿಗಳಲ್ಲಿ ಬಳಸಲು ಸಲಹೆ ನೀಡಲಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಕ್ತಿಮಾನ್ ಸರ್ವಿಸ್ ಮ್ಯಾನೇಜರ್ ಸುಭಾನ್, ಸಂದೀಪ್, ಶ್ರೀಕಾಂತ, ಮುಖಂಡರಾದ ಶೇಕ್‌ಷಾವಲಿ, ಶಕ್ತಿಮಾನ್ ಕೃಷಿ ಪರಿಕರಗಳ ಮಳಿಗೆ ಮಾಲೀಕ ವಾಹೀದ್ ಸಾಬ್, ಮುಖಂಡರಾದ ಶೇಕ್‌ಷಾವಲಿ, ವಾಹೀದ್ ಸೇರಿದಂತೆ ಇತರರು ಇದ್ದರು.

## ಬರಗಾಲ ಬಯಸುವ ರೈತ

**(1ನೇ ಪುಟದಿಂದ)** ಅನ್ನದಾತನ ಕಷ್ಟ-ಸಂಕಷ್ಟಗಳ ಬಗ್ಗೆ ಅವಹೇಳನ ಮಾಡುವುದು ಸರಿಯಲ್ಲ, ಸಚಿವರು, ಇಂತಹ ವಿಷಯಗಳ ಬಗ್ಗೆ ಬಹಳ ಎಚ್ಚರಿಕೆ, ಸೂಕ್ಷ್ಮತೆ ಮತ್ತು ಸಂಯಮದಿಂದ ಮಾತನಾಡಬೇಕು ಎಂದಿದ್ದಾರೆ.

ಕೃಷಿ ಸಾಲ ಮನ್ನಾ ಮಾಡುವ ಮುನ್ನ ರಾಜ್ಯದಲ್ಲಿ ನಡೆದ ರೈತರ ಸರಣಿ ಆತ್ಮಹತ್ಯಾಕಾಂಡ ನೆನಪು ಮಾಡಿಕೊಂಡರೆ ಈಗಲೂ ನನ್ನ ಮೈ ನಡುಗುತ್ತದೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ.

ರೈತ ಕೇಳುತ್ತಿರುವುದು ತನ್ನ ಹಕ್ಕನ್ನಷ್ಟೇ, ಭಿಕ್ಷೆಯನ್ನಲ್ಲ, ಸಚಿವರು ಬೇಷರತ್ ಕ್ಷಮೆ ಕೇಳಬೇಕು, ತಮ್ಮ ಹೇಳಿಕೆಯನ್ನು ಹಿಂದಕ್ಕೆ ಪಡೆಯಬೇಕು ಎಂದು ಒತ್ತಾಯಿಸಿದ್ದಾರೆ.

ಮತ್ತೊಂದೆಡೆ ವಿಜಯೇಂದ್ರ, ಸಚಿವರು ಬೇಜವಾಬ್ದಾರಿ ಹೇಳಿಕೆಗಳನ್ನು ನೀಡಿ ರೈತರನ್ನು ಅವಮಾನಿಸುತ್ತಿದ್ದಾರೆ, ಅಂತಹವರಿಗೆ ಮುಖ್ಯಮಂತ್ರಿಗಳು ಬುದ್ಧಿಮಾತು ಹೇಳಬೇಕು ಎಂದಿದ್ದಾರೆ.

ಪರಿಹಾರಕ್ಕಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂಬ ಅವರ ಹೇಳಿಕೆ ಖಂಡನಾರ್ಹ, ಅನ್ನ ಕೊಡುವ ರೈತರ ಬಗ್ಗೆ ಸಚಿವರ ಹೇಳಿಕೆ ಆಕ್ಷೇಪಾರ್ಹ ಎಂದಿದ್ದಾರೆ.

ಬಿಜೆಪಿ ಟೀಕೆಗಳಿಗೆ ತಿರುಗೇಟು ನೀಡಿರುವ ಸಚಿವರು, ರೈತರೇ ಸರ್ಕಾರಕ್ಕೆ ಸಾಲ ಕೊಡುವಷ್ಟು ಸಶಕ್ತವಾಗಿದ್ದಾರೆ. ರೈತರ ಬೆಳೆಗಳಿಗೆ ಸೂಕ್ತ ಬೆಲೆ ಕೊಡುವ ಪ್ರಧಾನಿ ದೇಶಕ್ಕೆ ಬೇಡವೇ? ಎಂದಿದ್ದಾರೆ. ಕೇಂದ್ರ ಬಿಜೆಪಿ ಸರ್ಕಾರ ಜಾರಿಗೆ ತಂದಿರುವ ಎ.ಪಿ.ಎಂ.ಸಿ. ಕಾಯ್ದೆಯಿಂದ ರೈತರಿಗೆ ಹಾನಿಯಾಗಿದೆ. ಸಕ್ಕರೆ, ಈರುಳ್ಳಿ ರಫ್ತಿನ ಮೇಲೆ ನಿಷೇಧ ತೆರವುಗೊಳಿಸಲಿ. ತಾಳೆ ಎಣ್ಣೆ ಆಮದು ನಿಷೇಧ ಮಾಡಲಿ. ಜನರನ್ನು ಎತ್ತಿ ಕಟ್ಟುವ ಕೆಲಸ ಮಾಡಬಾರದು ಎಂದಿದ್ದಾರೆ.

ಎಥೆನಾಲ್ ಕುರಿತ ನೀತಿಯನ್ನು ಒಂದೇ ದಿನದಲ್ಲಿ ಬದಲಿಸಲಾಗುತ್ತಿದೆ. ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ ಎಂದೂ ಸಚಿವರು ಹೇಳಿದ್ದಾರೆ.

ಈ ಹಿಂದೆ ಕೇಂದ್ರದಲ್ಲಿ ಮನಮೋಹನ್ ಸಿಂಗ್ ಸರ್ಕಾರ ಇದ್ದಾಗ ರೈತರ ಸಾಲ ಮನ್ನಾ ಮಾಡಲಾಗಿತ್ತು. ಪ್ರತಿ ಬಾರಿ ಬರ ಬಂದಾಗ ರಾಜ್ಯ ಸರ್ಕಾರವೇ ಏಕೆ ಸಾಲ ಮನ್ನಾ ಮಾಡಬೇಕು? ಕೇಂದ್ರ ಸರ್ಕಾರವೂ ಸಾಲ ಮನ್ನಾ ಮಾಡಲಿ ಎಂದು ಆಗ್ರಹಿಸಿದರು.

## 35 ಜೆಎನ್1 ಸೋಂಕು ಪ್ರಕರಣ

**(1ನೇ ಪುಟದಿಂದ)** ಲಿದ್ದೇವೆ ಎಂದೂ ಅವರು ಹೇಳಿದ್ದಾರೆ. ಜೆಎನ್.1 ರೂಪಾಂತರಿಯ ಬಹುತೇಕ ಪ್ರಕರಣಗಳು ಬೆಂಗಳೂರಿನಲ್ಲಿ ಕಂಡು ಬಂದಿವೆ. ಕೆಲ ಪ್ರಕರಣಗಳು ಮೈಸೂರು ಮತ್ತಿತರೆಡೆ ಕಂಡು ಬಂದಿವೆ ಎಂದು ಗುಂಡೂರಾವ್ ತಿಳಿಸಿದರು.

ಹೊಸ ವರ್ಷಾಚರಣೆ ಇಲ್ಲವೇ ಜನರು ಸೇರುವುದು ಇಲ್ಲವೇ ಯಾವುದೇ ಚಟುವಟಿಕೆಗಳ ಮೇಲೆ ನಿರ್ಬಂಧ ಇಲ್ಲ ಎಂದವರು ಮತ್ತೊಮ್ಮೆ ಸ್ಪಷ್ಟಪಡಿಸಿದ್ದಾರೆ.

## ಕ್ರಿಸ್‌ಮಸ್, ಸರ್ವಧರ್ಮ ಸಮ್ಮೇಳನದಿಂದ ಸಾಮರಸ್ಯ

**(1ನೇ ಪುಟದಿಂದ)** ಪ್ರತಿಯೊಬ್ಬರೂ ತನ್ನ ದಿನನಿತ್ಯದ ಅಗತ್ಯತೆಗೆ ಇತರೆ ಧರ್ಮ, ಜಾತಿಯವರನ್ನು ಪರಸ್ಪರವಾಗಿ ಅವಲಂಬಿಸಿ ಸೌಹಾರ್ದತೆ, ಭಾವೈಕ್ಯತೆಯಿಂದ ನಡೆಸುತ್ತಿರುವ ನೆಮ್ಮದಿಯ ಜೀವನಕ್ಕೆ ದಕ್ಕೆ ಉಂಟಾಗುತ್ತಿದೆ ಎಂದು ಕಳವಳ ವ್ಯಕ್ತ ಪಡಿಸಿದರು.

ಭವಿಷ್ಯದಲ್ಲಿ ದೇಶದ ನಿರ್ಮಾತೃಗಳಾಗಿರುವ ಶಾಲಾ ಮಕ್ಕಳಲ್ಲಿ ಮಾನವೀಯ ಮೌಲ್ಯ ಗಳನ್ನು, ಅನ್ಯಧರ್ಮೀಯರನ್ನು ಸಮಾನವಾಗಿ ಕಾಣುವ ಮನಸ್ಥಿತಿಯನ್ನು ಶಿಕ್ಷಣ ಸಂಸ್ಥೆಗಳು ಬಿತ್ತಬೇಕಿದೆ. ಅಲ್ಲದೇ ಪೋಷಕರು ಅಂಕ ಗಳಿಕೆ ದೃಷ್ಟಿಯಿಂದ ಮಕ್ಕಳಿಗೆ ಮಾನಸಿಕ, ದೈಹಿಕ ನಿಂದನೆ ಮಾಡದೇ ಆಸಕ್ತಿದಾಯಕ ಕ್ಷೇತ್ರದಲ್ಲಿ ಪ್ರತಿಭೆಯನ್ನು ಪ್ರೋತ್ಸಾಹಿಸಬೇಕು ಎಂದು ಕಿವಿಮಾತು ಹೇಳಿದರು.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಬ್ರಹ್ಮಾಕುಮಾರಿ ಭಾರತೀಜಿ ಮಾತನಾಡಿ, ಜಗತ್ತಿಗೆ ಚಂದ್ರಯಾನ ಪರಿಚಯಿಸಿದ ಕೀರ್ತಿ ಭಾರತದ ಇಸ್ರೋ ಸಂಸ್ಥೆಗೆ ಸಲ್ಲುತ್ತದೆ. ನಾವೆಲ್ಲರೂ ಭಾರತೀಯರಾಗಿದ್ದು, ಭಾವೈಕ್ಯತೆಯಿಂದ ಭಾವ ಬೆಸೆಯಬೇಕಿದೆ. ಪಾಪವನ್ನು ದ್ವೇಷಿಸಿ, ಪಾಪಿಯನ್ನು ಪ್ರೀತಿಸಬೇಕು. ಧಾರ್ಮಿಕ ಕೇಂದ್ರಗಳು ದಿವ್ಯಶಕ್ತಿಯ ಕೇಂದ್ರಗಳಿದ್ದಂತೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ದಾವಣಗೆರೆ ಡಾನ್ ಬಾಸ್ಕೋದ ಫಾದರ್ ರೆಜಿ ಜೇಕಬ್, ಶಿವಮೊಗ್ಗದ ಅಂತರ್ ಧರ್ಮೀಯ ಸೌಹಾರ್ದ ಆಯೋಗದ ನಿರ್ದೇಶಕ ವಂ.ಫಾದರ್ ನೆಲ್ಸನ್ ಪಿಂಟೊ, ಪ್ರೇರಣಾ ಟ್ರಸ್ಟ್ ನ ಫಾದರ್ ಸಿಲ್ವೆಸ್ಟರ್ ಫಿರೇರಾ, ಡಾ.ಶ್ವೇತಾ, ಜ್ಞಾನತರಂಗಿಣಿ ವಿದ್ಯಾ ಸಂಸ್ಥೆಯ ಪಿ.ಎಸ್. ಅರವಿಂದನ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಜಿಲ್ಲಾ ನಿರ್ದೇಶಕ ಜನಾರ್ದನ್, ಸಿ.ತಿಪ್ಪೇಸ್ವಾಮಿ, ಕರವೇ ಮಹಾಂತೇಶ್, ಇಂದಿರಾ ಗುರುಸ್ವಾಮಿ, ಶಾಹಿನಾ ಬೇಗಂ ಮುಂತಾದವರು ಇದ್ದರು.

## ಹೈಕಮಾಂಡ್ ಮೇಲೆ ಡಿಸಿಎಂ ಸ್ಥಾನಕ್ಕೆ ಒತ್ತಡ

**(1ನೇ ಪುಟದಿಂದ)** ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸತೀಶ್ ದೆಹಲಿಗೆ ತೆರಳುವುದಕ್ಕೂ ಮುನ್ನ ಪರಿಶಿಷ್ಟ ಜಾತಿ ಹಾಗೂ ವರ್ಗದ ಪಕ್ಷದ ಶಾಸಕರ ಜೊತೆ ಮತ್ತು ತಮ್ಮ ಹೋರಾಟಕ್ಕೆ ತೆರೆಮರೆಯಲ್ಲಿ ಬೆಂಬಲವಾಗಿ ನಿಂತವರ ಜೊತೆಯಲ್ಲೂ ಸಭೆಗಳನ್ನು ನಡೆಸಿದ್ದರು ಎನ್ನಲಾಗಿದೆ.

## ಕೆ.ಎನ್.ಹಳ್ಳಿ, ಜಿಗಳಿ ಕ್ಯಾಂಪ್‌ನಲ್ಲಿ ಸಂಭ್ರಮದ ಕ್ರಿಸ್‌ಮಸ್ ಆಚರಣೆ



ಮಲೇಬೆನ್ನೂರು, ಡಿ.25- ಕೆ.ಎನ್.ಹಳ್ಳಿ ಮತ್ತು ಜಿಗಳಿ ಕ್ಯಾಂಪ್ (ವಿನಾಯಕ ನಗರ ಕ್ಯಾಂಪ್) ನಲ್ಲಿರುವ ಚರ್ಚ್‌ಗಳಲ್ಲಿ ಸೋಮವಾರ ಕ್ರಿಸ್‌ಮಸ್ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಬೆಳಗ್ಗೆ ಚರ್ಚ್‌ಗಳಲ್ಲಿ ಆರಂಭದ ಪ್ರಾರ್ಥನೆ ಮಾಡಿ, ನಂತರ ಗೀತಾರಾಧನೆ ಮಾಡಲಾಯಿತು. ಬಳಿಕ ಚರ್ಚ್ ಫಾದರ್ ಅವರು ಉಪನ್ಯಾಸ ಹಾಗೂ ಕ್ರಿಸ್‌ಮಸ್ ಸಂದೇಶ ನೀಡಿದರು. ಕೇಕ್ ಕತ್ತರಿಸಿ ಹಬ್ಬ ಆಚರಿಸಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು.

## ಹರಿಹರ ಆರೋಗ್ಯಮಾತೆ ಬಸಿಲಿಕ ಚರ್ಚ್‌ನಲ್ಲಿ ಕ್ರಿಸ್‌ಮಸ್ ಆಚರಣೆ



ಹರಿಹರ, ಡಿ. 25 - ನಗರದಲ್ಲಿ ಕ್ರಿಸ್‌ಮಸ್ ಹಬ್ಬದ ನಿಮಿತ್ತ ಹರಿಹರದ ವಿಶ್ವ ವಿಖ್ಯಾತ ಪುಣ್ಯಕ್ಷೇತ್ರ ಹರಿಹರದ ಆರೋಗ್ಯ ಮಾತೆಯ ಬಸಿಲಿಕ ಪುಣ್ಯಕ್ಷೇತ್ರ ಚರ್ಚ್‌ನಲ್ಲಿ ಸಡಗರದಿಂದ ಕ್ರಿಸ್‌ಮಸ್ ಆಚರಿಸಲಾಯಿತು. ದೀಪಾಲಂಕಾರಗಳಿಂದ ಸಿಂಗರಿಸಿ, ಆವರಣದಲ್ಲಿ ಕ್ರಿಸ್‌ಮಸ್ ಹಟ್ ಹಾಕಲಾಗಿದ್ದು, ಬೊಂಬೆಗಳು, ಕುರಿಗಳು, ಹಸಿರು ಹುಲ್ಲುಗಾವಲು ಮುಂತಾದವುಗಳೊಂದಿಗೆ ಏಸು ಜನಿಸಿದ ಗುಡಿಸಲು, ಜನನದ ದೃಶ್ಯಾವಳಿಗಳನ್ನು ಸ್ಥಾಪಿಸಲಾಗಿತ್ತು.

ಮನೆ, ಮನೆಗಳಲ್ಲಿ ಕ್ರಿಸ್‌ಮಸ್ ಟ್ರೀ ನೆಟ್ಟು, ಅದನ್ನು ವಿದ್ಯುತ್ ದೀಪಗಳಿಂದ ಸಿಂಗರಿಸಲಾಗಿತ್ತು. ನಕ್ಷತ್ರಾಕಾರದ ಗೂಡು ದೀಪವನ್ನೂ ಇಟ್ಟು ಮನೆಗಳನ್ನು ಸಿಂಗರಿಸಿರುವುದು ಕಂಡುಬಂತು.

ಹಬ್ಬದ ಪ್ರಯುಕ್ತ ನಡುರಾತ್ರಿ ಜಾಗರಣೆ ದಿವ್ಯಬಲಿ ಪೂಜೆಯಲ್ಲಿ ಸಾವಿರಾರು ಭಕ್ತರು ಸಂತೋಷ, ಸಂಭ್ರಮದಿಂದ ಪಾಲ್ಗೊಂಡಿದ್ದರು. ಪ್ರಧಾನ ಗುರುಗಳಾದ ಫಾದರ್ ಕೆ.ಎ. ಜಾರ್ಜ್ ಪ್ರಾರ್ಥನೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಭಕ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ಕ್ರಿಸ್‌ಮಸ್ ಹಬ್ಬ ಭಗವಾನ್ ಕ್ರಿಸ್ತನು ಮನುಜನಾಗಿ ಧರೆಗೆ ಮಾನವ ರೂಪ ಧರಿಸಿ ಬಂದ ಸ್ಮರಣೆಯ ದಿನವಾಗಿದೆ. ಇದು ನಮ್ಮೆಲ್ಲರಿಗೆ ಪ್ರೇರಣೆಯಾಗಲಿ.

ನಮ್ಮಲ್ಲಿರುವ ಅಹಂ ತೊಲಗಲಿ, ಜೊತೆಗೆ ಎಲ್ಲರಲ್ಲೂ ಪ್ರೀತಿ ಮನೆ ಮಾಡಲಿ ಎಂದು ಹೇಳಿದರು.

# ಮಕ್ಕಳ ಬೌದ್ಧಿಕ, ಸಾಂಸ್ಕೃತಿಕ ಬೆಳವಣಿಗೆಗೆ ಪೂರಕ ವಾತಾವರಣ ಶಾಲೆಗಳಲ್ಲಿರಬೇಕು

## ಕುಂಬಳೂರು ಬಸವ ಗುರುಕುಲ ಸಂಸ್ಥೆ ಕಾರ್ಯಕ್ರಮದಲ್ಲಿ ಸಾಣೇಹಳ್ಳಿ ಶ್ರೀಗಳು




ಮಲೇಬೆನ್ನೂರು, ಡಿ.25- ಮಕ್ಕಳಲ್ಲಿ ಬೌದ್ಧಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆಗೆ ಪೂರಕವಾದ ವಾತಾವರಣ ಶಾಲೆಗಳಲ್ಲಿ ಇರಬೇಕೆಂದು ಸಾಣೇಹಳ್ಳಿ ಮಠದ ಶ್ರೀ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಅವರು, ಸೋಮವಾರ ಕುಂಬಳೂರು ಗ್ರಾಮದಲ್ಲಿ ತರಳಬಾಳು ವಿದ್ಯಾಸಂಸ್ಥೆ ಹಾಗೂ ಶ್ರೀ ಬಸವ ಗುರುಕುಲ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀ ಶರಣ ಬಿ.ಪುಟ್ಟಣ ಹಿರಿಯ ಪ್ರಾಥಮಿಕ ಶಾಲೆ, ಶ್ರೀ ಶರಣ ಸಂಗಮ ಪ್ರೌಢಶಾಲೆ, ಶ್ರೀ ಬಸವ ಗುರುಕುಲ ಆಂಗ್ಲ ಮಾಧ್ಯಮ ನರ್ಸರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಶಾಲಾ ವಾರ್ಷಿಕೋತ್ಸವ ಮತ್ತು ಸದ್ಭಾವನಾ ಚಿಂತನಾಗೋಷ್ಠಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಬಹಳ ದುಡ್ಡು ಕೊಟ್ಟು ಹೈಟೆಕ್ ಶಾಲೆಗಳಲ್ಲಿ ಕಳುಹಿಸಿದರೆ ನಮ್ಮ ಮಕ್ಕಳು ಒಳ್ಳೆಯ ವಿದ್ಯೆ ಕಲಿಯುತ್ತಾರೆಂಬ ನಂಬಿಕೆ ಪೋಷಕರಲ್ಲಿದೆ. ಆದರೆ, ದೊಡ್ಡ ಕಟ್ಟಡ, ದೊಡ್ಡ ಮೈದಾನಕ್ಕಿಂತ ಆ ಶಾಲೆಯಲ್ಲಿ ಗುರು-ಶಿಷ್ಯರ ಬಾಂಧವ್ಯ ಹೇಗಿದೆ ? ಮತ್ತು ಮಕ್ಕಳಿಗೆ ಶಿಕ್ಷಕರು ಏನನ್ನು ಕಲಿಸುತ್ತಾರೆಂಬುದು ಬಹಳ ಮುಖ್ಯವಾಗಿದೆ.

ಪಠ್ಯದ ಜೊತೆಗೆ ಪಠ್ಯೇತರ ವಿಷಯಗಳನ್ನು ಮಕ್ಕಳಿಗೆ ಕಲಿಸಬೇಕು. ಶರಣರ ವಚನಗಳನ್ನು ಈಗಿನಿಂದಲೇ ಹೇಳಿಕೊಡಬೇಕು. ಆಗ ಮಕ್ಕಳು ಭಾಷೆಯಲ್ಲಿನ ಸತ್ವವನ್ನು ಅರಗಿಸಿಕೊಳ್ಳುತ್ತಾರೆ.

ಇಂಗ್ಲಿಷ್ ಅನ್ನು ಪರಭಾಷೆ ಎಂದು ತಿಳಿದುಕೊಳ್ಳಬೇಡಿ. ಕನ್ನಡದ ಜೊತೆಗೆ ಇಂಗ್ಲಿಷ್, ಹಿಂದಿ ಕೂಡಾ ಪ್ರಸ್ತುತ ಬಹಳ ಮುಖ್ಯವಾಗಿದ್ದು, ಈ ನಿಟ್ಟಿನಲ್ಲಿ ಶಿಕ್ಷಕರೂ ಚೆನ್ನಾಗಿ ಓದಬೇಕು. ಬೇರೆ ಬೇರೆ ವಿಷಯಗಳನ್ನು ಮಕ್ಕಳಿಗೆ ಅರ್ಥವಾಗುವ ರೀತಿ ಸರಳವಾಗಿ ಹೇಳಿಕೊಡಬೇಕೆಂದು ಶ್ರೀಗಳು ಹೇಳಿದರು.

ನಮ್ಮ ಧರ್ಮದ ಗುರು ಬಸವಣ್ಣ ಎಂದು ಪ್ರತಿಯೊಬ್ಬರೂ ಹೇಳಬೇಕು. ಏಕೆಂದರೆ ಬಸವಣ್ಣನೇ ನಮ್ಮ ಬದುಕಿಗೆ ಚೈತನ್ಯ ನೀಡಿ ಬೆಳಕಿನ ಕಡೆಗೆ ಕರೆದೊಯ್ದಿದ್ದಾರೆ. ನಮ್ಮ ದೇಶಕ್ಕೆ ಸಂವಿಧಾನ ಎಷ್ಟೋ ಮುಖ್ಯವೋ, ನಮ್ಮ ಬದುಕಿಗೆ ಬಸವಣ್ಣನವರ ವಚನಗಳು ಅಷ್ಟೇ ಮುಖ್ಯವಾಗಿವೆ. ಇದನ್ನೇ ಮಕ್ಕಳು ಈ ವೇದಿಕೆಯಲ್ಲಿ ವಚನಗಳ ಭಾವಕ್ಕೆ ಪೂರಕವಾಗಿ ನೃತ್ಯ ಮಾಡಿ, ನಿಮ್ಮ ಗಮನ ಸೆಳೆದರೆಂದು ಹೇಳಿದರು.

ಬಸವ ಗುರುಕುಲ ವಿದ್ಯಾಸಂಸ್ಥೆ ಉಪಾಧ್ಯಕ್ಷ ಕೆ.ತೀರ್ಥಪ್ಪ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಕಾರ್ಯದರ್ಶಿ ಹಳೇ ಮನೆ ಶಂಭುಲಿಂಗಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ಶಾಸಕ ಬಿ.ಪಿ.ಹರೀಶ್ ಮಕ್ಕಳಿಗೆ ಬಹುಮಾನ ವಿತರಿಸಿ ಮಾತನಾಡಿದರು. ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಉಮಾದೇವಿ ಎಂ.ಹೆಚ್. ಶಿವರಾಮಚಂದ್ರಪ್ಪ, ಉಪಾಧ್ಯಕ್ಷ ಎನ್.ಜಿ.ಕಲ್ಲೇಶ್, ವಿದ್ಯಾಸಂಸ್ಥೆಯ ಖಜಾಂಚಿ ಬಿ.ಎಂ.ಹನುಮಂತಪ್ಪ, ಸದಸ್ಯರಾದ ಎಸ್.ಜಿ.ನಾಗರಾಜಪ್ಪ, ಹೆಚ್. ಬಿ.ಶಿವರುದ್ರಪ್ಪ, ಡಿ.ಹೆಚ್.ರವೀಂದ್ರಪ್ಪ, ಬಿ.ಹೆಚ್. ಕಿರಣ್‌ಕುಮಾರ್, ವಕೀಲ ಹೆಚ್.ಬಿ.ಶಿವಕುಮಾರ್, ದಾನಿಗಳಾದ ಬಿ.ಶಂಭುಲಿಂಗಪ್ಪ, ಜಿ.ಶಂಕರಗೌಡ ಹಳೇಮನೆ ಉಮಾಪತಿ, ಎಸ್‌ಡಿಎಂಸಿ ಅಧ್ಯಕ್ಷರಾದ ಕೋಟ್ಯಾಳ್ ಆಂಜನೇಯ, ಕೆ.ಹೆಚ್.ನಾಗೇಂದ್ರಪ್ಪ, ಉಪಾಧ್ಯಕ್ಷರಾದ ಹಳೇಮನೆ ಚಂದ್ರಪ್ಪ, ಹಾಲಮ್ಮ ರಾಜಪ್ಪ, ಶಾಲಾ ಮುಖ್ಯ ಶಿಕ್ಷಕರಾದ ಬಸವರಾಜ್ ಬಿ.ಗುಂಡಣ್ಣನವರ್, ಕೆ.ಶಿರಸಾಚಾರ್, ಎಂ. ಸಿದ್ದಾರ್ಥ ಮತ್ತಿತರರು ಈ ವೇಳೆ ಹಾಜರಿದ್ದರು.

# ಬೀಸುತ್ತಿರುವ ಸಂವಿಧಾನ, ಪ್ರಜಾಪ್ರಭುತ್ವ ವಿರೋಧಿ ಬಿರುಗಾಳಿಯಿಂದ ದೇಶ ರಕ್ಷಣೆ ಅಗತ್ಯ



ಹರಿಹರ, ಡಿ.25- ಬೀಸುತ್ತಿರುವ ಸಂವಿಧಾನ ಮತ್ತು ಪ್ರಜಾಪ್ರಭುತ್ವ ವಿರೋಧಿ ಬಿರುಗಾಳಿಯಿಂದ ದೇಶವನ್ನು ರಕ್ಷಿಸುವ ಅಗತ್ಯ ಈಗ ಎದುರಾಗಿದೆ ಎಂದು ಬೆಂಗಳೂರಿನ ಕವಿ, ಸಂಶೋಧಕ ಹಾಗೂ ಸಾಮಾಜಿಕ ಕಾರ್ಯಕರ್ತ ಡಾ. ವಡ್ಡಗೆರೆ ನಾಗರಾಜಯ್ಯ ಹೇಳಿದರು.

ಇಲ್ಲಿನ ಪರಸ್ಪರ ಬಳಗ, ಕನ್ನಡ ಸಾಹಿತ್ಯ ಪರಿಷತ್ತು, ತಾಲ್ಲೂಕು ಬಂಡಾಯ ಸಾಹಿತ್ಯ ಸಂಘಟನೆ, ಚಿಂತನ ಬಳಗ, ನಕ್ಷತ್ರ ಟಿವಿ ಬಳಗ, ಸಾಹಿತ್ಯ ಸಂಗಮ ಮತ್ತು ಕರ್ನಾಟಕ ಜಾನಪದ ಪರಿಷತ್‌ನಿಂದ ಭಾನುವಾರ ನಗರದ ರಚನಾ ಕ್ರೀಡಾ ಟ್ರಸ್ಟ್‌ನಲ್ಲಿ ಆಯೋಜಿಸಿದ್ದ ಕರ್ನಾಟಕ, ಕನ್ನಡ, ಸಂವಿಧಾನ ಕುರಿತು ಚಿಂತನೆ, ಕನ್ನಡ ನಾಡು, ನುಡಿ ಕುರಿತು ಕವಿಗೋಷ್ಠಿ ಹಾಗೂ ಅಂಬೇಡ್ಕರ್ ಮತ್ತು ಸಂವಿಧಾನ ಕುರಿತು ಗೀತ ಗಾಯನ ಕರ್ನಾಟಕ ಸುವರ್ಣ ಸಂಭ್ರಮದಲ್ಲಿ ಭಾರತೀಯ ಸಂವಿಧಾನದ ಅಂತರಂಗ ಮತ್ತು ಬಹಿರಂಗ ವಿಷಯ ಕುರಿತು ಅವರು ಉಪನ್ಯಾಸ ನೀಡಿದರು.

ಹಿಜಾಬ್ ವಿವಾದ, ಅಸ್ಪೃಶ್ಯತೆ, ದಬ್ಬಾಳಿಕೆ, ಶೋಷಣೆ, ಸಾಮಾಜಿಕ ಅಸಮಾನತೆ, ಸಿಗದ ಸಮಾನ ಅವಕಾಶ, ಶೇ. 4ರಷ್ಟು ಇರುವ ಜನಾಂಗದವರಿಗೆ ಶೇ.10 ರಷ್ಟು ಮೀಸಲಾತಿಯನ್ನು ಯಾರೂ ಕೇಳದಿದ್ದರೂ ನೀಡಿರುವುದು, ಜಾರಿಯಾಗದ ಜಸ್ಟಿಸ್ ಸಾಚಾರ್ ಆಯೋಗದ ವರದಿ, ದುರುದ್ದೇಶ ಪೂರಿತ ಜಾತಿ ಸಮೀಕ್ಷೆಗಳು, ಹಿಂದಿ ಭಾಷೆ ಹೇರಿಕೆ ಹೀಗೆ ವಿವಿಧ ಆಯಾಮಗಳಿಂದ ಬಿರುಗಾಳಿಯಂತೆ ದೇಶವನ್ನು ನಲುಗಿಸಲಾಗುತ್ತಿದೆ.

ಅಂಬೇಡ್ಕರ್‌ರವರು ನೀಡಿದ ಮೂರು ಮಂತ್ರಗಳಾದ ಶಿಕ್ಷಣ, ಸಂಘಟನೆ ಮತ್ತು ಹೋರಾಟದ ಮೂಲಕ ಬಿರುಗಾಳಿಯನ್ನು ತಡೆಯಬೇಕಿದೆ. ಇಲ್ಲಿ ಶಿಕ್ಷಣ ಎಂದರೆ ಅಕ್ಷರ ಅಭ್ಯಾಸ ಮಾತ್ರ ಅಲ್ಲ, ಸಾಂಸ್ಕೃತಿಕ ಮತ್ತು ವೈಚಾರಿಕವಾಗಿಯೂ ಶಿಕ್ಷಣ ನೀಡಬೇಕು. ಆ ಮೂಲಕ ಭಾರತೀಯರು ಪ್ರಬುದ್ಧ ಶಿಕ್ಷಣವಂತರಾಗಬೇಕು. ಸಾಮಾಜಿಕವಾಗಿ ಎಲ್ಲರೂ ಪ್ರಜಾಸತ್ತಾತ್ಮಕವಾಗಿ ಸಂಘಟಿತರಾಗಬೇಕು, ಪಾಲ್ಗೊಳ್ಳಬೇಕು, ಸಂಘಟಿತವಾಗಿ ತೀವ್ರತೆಯೊಂದಿಗೆ ಹೋರಾಡಿ, ಆದರೆ ಆ ಹೋರಾಟ ಸಂವಿಧಾನಾತ್ಮಕವಾಗಿರಲಿ ಎಂದರು.

ಮಹಿಳೆ ಒಬ್ಬಳೇ ರಾತ್ರಿ ನಿರ್ಭಯವಾಗಿ ಸಂಚರಿಸಿದಾಗ ಭಾರತಕ್ಕೆ ನಿಜವಾದ ಸ್ವಾತಂತ್ರ್ಯ ಲಭಿಸಿದಂತೆ ಎಂದಿದ್ದ ಅಂಬೇಡ್ಕರ್‌ರವರು ಮಹಿಳೆಯರಿಗೆ ಆಸ್ತಿಯಲ್ಲಿ ಹಕ್ಕು, ಮತದಾನ, ಚುನಾವಣೆಗೆ ಸ್ಪರ್ಧಿಸುವ, ಶಿಕ್ಷಣ ಪಡೆಯುವ, ಉದ್ಯೋಗ ಮಾಡುವ, ವೇತನ ಸಹಿತ ಹೆರಿಗೆ ರಜೆ, ದಲಿತರಿಗೆ, ಶೋಷಿತರಿಗೆ ಮೀಸಲಾತಿಯ ಸೌಲಭ್ಯಗಳನ್ನು ಸಂವಿಧಾನದ ಮೂಲಕ ನೀಡಿದ್ದಾರೆಂದರು.

ರಾಷ್ಟ್ರ ಧ್ವಜ ತಿರಂಗ ಅಲ್ಲ, ಅದು ಚೌರಂಗ, ಕೇಸರಿ, ಬಿಳಿ, ಹಸಿರಿನ ಜೊತೆಗೆ ಸಮಾನತೆಯನ್ನು ಸಾರುವ ನೀಲಿ ಬಣ್ಣದ ಅಶೋಕನ ಚಕ್ರವನ್ನು ಉದ್ದೇಶ ಪೂರ್ವಕವಾಗಿ ಮರೆಮಾಚಲಾಗುತ್ತಿದೆ. ತಿರಂಗದ ಬದಲು ರಾಷ್ಟ್ರ ಧ್ವಜವನ್ನು ಚೌರಂಗ ಎಂದು ಗುರುತಿಸಬೇಕಿದೆ ಎಂದರು.

ಬೀರೂರು-ಸಮ್ಮಸಗಿ ಹೆದ್ದಾರಿ ಕಾಮಗಾರಿ ನಡೆಯಲು ನಿರಂತರ ಧರಣಿ ನಡೆಸಿದ ಜಯ ಕರ್ನಾಟಕ ಸಂಘಟನೆ ತಾಲ್ಲೂಕು ಅಧ್ಯಕ್ಷ ಎಸ್.ಗೋವಿಂದ ಅವರನ್ನು ಸತ್ಕರಿಸಿದ ನಂತರ ಕಾರ್ಮಿಕ ಮುಖಂಡ ಎಚ್.ಕೆ.ಕೊಟ್ರಪ್ಪ ಮಾತನಾಡಿ, ಯಾವುದೇ ಜಾತಿ, ಪಕ್ಷ, ಆರ್ಥಿಕ ಬಲ ಇಲ್ಲದೆ, ಆಟೋ ಚಾಲಕನಾದ ಎಸ್.ಗೋವಿಂದ ಸಾರ್ವಜನಿಕ ವಿಷಯಕ್ಕಾಗಿ ಸತತ 25 ದಿನ ಧರಣಿ ಸತ್ಯಾಗ್ರಹ ನಡೆಸಿರುವುದು ಬೇರೆ ಹೋರಾಟಗಾರರಿಗೂ ಪ್ರೇರಣಾದಾಯಕ ಎಂದರು.

ಸಾಹಿತಿ, ನಿವೃತ್ತ ಪ್ರಾಚಾರ್ಯ ಪ್ರೊ. ಎಚ್.ಎ.ಭಿಕ್ಷಾವರ್ತಿಮಠ ಅಧ್ಯಕ್ಷತೆ ವಹಿಸಿದ್ದರು. ಸಾಹಿತಿ, ನಿವೃತ್ತ ಕನ್ನಡ ಭಾಷಾ ಉಪನ್ಯಾಸಕ ಪ್ರೊ.ಸಿ.ವಿ.ಪಾಟೀಲ್ ವಿಷಯ ಪ್ರವೇಶ ಮಾಡಿದರು. ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಎನ್.ರುದ್ರಮುನಿ, ಹಿರಿಯ ಕ್ರೀಡಾಪಟು ಎಚ್. ನಿಜಗುಣ, ಪತ್ರಕರ್ತ ಟಿ.ಇನಾಯತ್ ಉಲ್ಲಾ, ಹರಪನಹಳ್ಳಿ ಪ್ರಾಚಾರ್ಯ ಎಚ್.ಮಲ್ಲಿಕಾರ್ಜುನ, ಎ.ರಿಯಾಜ್ ಅಹ್ಮದ್, ಎಚ್.ನಿಜಗುಣ, ಬಿ.ಬಿ.ರೇವಣನಾಯ್ಕ್, ವಿ.ಬಿ.ಕೊಟ್ರೇಶ್, ಈಶಪ್ಪ ಬೂದಿಹಾಳ್ ಮಾತನಾಡಿದರು.

ಬಂಡಾಯ ಕವಿ ಜೆ.ಕಲೀಂಬಾಷಾ ಇವರ ಅಧ್ಯಕ್ಷತೆಯಲ್ಲಿ ನಡೆದ ಕವಿಗೋಷ್ಠಿಯಲ್ಲಿ ಕವಿಗಳಾದ ಎಸ್.ಎಚ್.ಹೂಗಾರ್, ಹುಲಿಕಟ್ಟಿ ಚನ್ನಬಸಪ್ಪ, ಸುಬ್ರಹ್ಮಣ್ಯ ನಾಡಿಗೇರ್, ಜೆ. ವಸುಪಾಲಪ್ಪ, ಮಲ್ಲಿಕಾರ್ಜುನ ಅಣಜಿಮಠ, ಡಾ.ವೀಣಾ ಪಿ., ರತ್ನವ್ವ ಸಾಲಿಮಠ, ಎ.ಬಿ.ಮಂಜಮ್ಮ, ವಿವೇಕಾನಂದಸ್ವಾಮಿ, ಬಿ.ಮಗ್ದುಂ, ಅಶ್ಫಾಖ್ ಅಹ್ಮದ್, ವಿ.ಬಿ.ಕೊಟ್ರೇಶ್, ಗಂಗಾಧರ ಬಿ.ಎಲ್. ನಿಟ್ಟೂರು, ಎ.ಸಿ.ಮಂಜಪ್ಪ, ಪ್ರವೀಣ ಎಂ.ಬಿ. ಕವನ ವಾಚನ ಮಾಡಿದರು.

KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas


ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ
ಶ್ರೀ ಡಿ. ಕೆ. ಶಿವಕುಮಾರ್ ಮಾನ್ಯ ಉಪಮುಖ್ಯಮಂತ್ರಿ
ಯುವಜನರ ಭಾಗ್ಯವಿಧಾತ...
ಯುವ ನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000 ಪದವೀಧರರಿಗೆ
₹1500 ಡಿಪ್ಲೋಮಾ ಪದವೀಧರರಿಗೆ
ಉದ್ಯೋಗ ದೊರೆಯುವ ವರೆಗೆ ಸರ್ಕಾರ ನೀಡುವ 3000 ರೂ. ನಮ್ಮಂತಹ ಇಂಜಿನಿಯರಿಂಗ್ ಪದವೀಧರರಿಗೆ ಹೆಚ್ಚು ಅನುಕೂಲ ಮಾಡಿಕೊಡಲಿದೆ. ಈ ಸಹಾಯಧನದಿಂದ ಕೆಲಸಕ್ಕಾಗಿ ಅರ್ಜಿ ಸಲ್ಲಿಸಲು ಆಗುವ ಖರ್ಚನ್ನು ಭರಿಸಲು ನೆರವಾಗಲಿದೆ.
-ಭೂಮಿಕ ಎಸ್. ತಗಡೂರು
ಇಂಜಿನಿಯರಿಂಗ್ ಓದಿರುವ ನಾನು ಕೆಲಸದ ಹುಡುಕಾಟದಲ್ಲಿದ್ದೇನೆ. ಮುಂದಿನ ಎರಡು ವರ್ಷಗಳವರೆಗೆ ಸರ್ಕಾರ ನೀಡುವ 3000 ರೂ. ನನ್ನ ಪ್ರತಿ ತಿಂಗಳ ಖರ್ಚನ್ನು ಸರಿದೂಗಿಸಿಕೊಳ್ಳಲು ನೆರವಾಗಲಿದೆ. ಇದಕ್ಕಾಗಿ ಸರ್ಕಾರಕ್ಕೆ ಅನಂತ ಅನಂತ ಧನ್ಯವಾದಗಳು.
- ನಾಗರಾಜ್
ಪದವಿ ಹೊಂದಿರುವ ನನಗೆ ಆರ್ಥಿಕ ತೊಂದರೆಯಿಂದ ಕೆಲಸ ಮಾಡುವುದು ಅನಿವಾರ್ಯ. ಮನೆಯ ಖರ್ಚನ್ನು ನಿಭಾಯಿಸಲು ಕೆಲಸ ಹುಡುಕುತ್ತಿರುವ, ನನಗೆ ಪ್ರತಿ ತಿಂಗಳು ಸರ್ಕಾರ ನೀಡುವ 3000 ರೂ. ನನ್ನಲ್ಲಿ ಆರ್ಥಿಕ ಚೈತನ್ಯ ತುಂಬಿದೆ. ಇದಕ್ಕಾಗಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರಿಗೆ ಧನ್ಯವಾದಗಳು.
- ಕೀರ್ತನಾ
ಯುವಜನರ ಶ್ರೇಯೋಭಿವೃದ್ಧಿ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರದ ಸಂಕಲ್ಪ. ಉದ್ಯೋಗ ದೊರೆಯುವವರೆಗೆ ಅಥವಾ ಗರಿಷ್ಠ 2 ವರ್ಷದವರೆಗೆ ಯುವನಿಧಿ ಯೋಜನೆಯಡಿ ಸಹಾಯಧನ ನೀಡಿ ಯುವಕ ಯುವತಿಯರ ಬದುಕಿನ ಆಶಾಕಿರಣವಾಗಿದೆ.
26 ಡಿಸೆಂಬರ್ 2023 ರಿಂದ ನೋಂದಣಿ ಪ್ರಾರಂಭ
ಯುವನಿಧಿ ಯೋಜನೆ ಬಗ್ಗೆ ಮಾಹಿತಿ ನೀಡುತ್ತಿರುವ ಕೌಶಲ್ಯಾಭಿವೃದ್ಧಿ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್
2023ರಲ್ಲಿ ಪದವಿ/ಡಿಪ್ಲೋಮಾ ಉತ್ತೀರ್ಣರಾದ ವಿದ್ಯಾರ್ಥಿಗಳು ಕನಿಷ್ಠ 6 ತಿಂಗಳವರೆಗೆ ಸರ್ಕಾರಿ/ ಖಾಸಗಿ ಉದ್ಯೋಗ ಹೊಂದಿಲ್ಲದವರು ಮತ್ತು ಕರ್ನಾಟಕದಲ್ಲಿ ವಾಸವಿರುವವರು
ಸ್ವಯಂ ಉದ್ಯೋಗ ಹೊಂದಿಲ್ಲದವರು ಮತ್ತು ಉನ್ನತ ವಿದ್ಯಾಭ್ಯಾಸ ಮುಂದುವರಿಸದೇ ಇರುವವರು
ನೋಂದಣಿಗೆ ಅಗತ್ಯವಿರುವ ದಾಖಲಾತಿಗಳು ಎಸ್.ಎಸ್.ಎಲ್.ಸಿ., ಪಿಯುಸಿ, ಪದವಿ/ಡಿಪ್ಲೋಮಾ ಪ್ರಮಾಣ ಪತ್ರ
ನುಡಿದಂತೆ ನಡೆದಿದ್ದೇವೆ...
Helpline : 1800 599 9918
ನೋಂದಾಯಿಸಲು ಭೇಟಿ ನೀಡಿ https://sevasindhugs.karnataka.gov.in
ಉಚಿತವಾಗಿ ಕರ್ನಾಟಕ ಒನ್, ಬೆಂಗಳೂರು ಒನ್, ಗ್ರಾಮ ಒನ್ ಮತ್ತು ಬಾಪೂಜಿ ಸೇವಾ ಕೇಂದ್ರಗಳಲ್ಲಿ ಕೂಡ ಅರ್ಜಿ ಸಲ್ಲಿಸಬಹುದು.
ಸೇವಾ ಸಿಂಧು ಪೋರ್ಟಲ್‌ನಲ್ಲಿ ಮಾಸಿಕವಾಗಿ ನಿರುದ್ಯೋಗ ದೃಢೀಕರಣವು ಕಡ್ಡಾಯ. ತಪ್ಪು ಮಾಹಿತಿ ನೀಡಿದ್ದಲ್ಲಿ ದಂಡ ವಿಧಿಸಲಾಗುವುದು.
ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.
ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು
ಕರ್ನಾಟಕ ವಾರ್ತೆ

# ಹರಿಹರ : ವಸತಿ ಯೋಜನೆ ರೂಪಿಸಲು ಆಗ್ರಹಿಸಿ ಇಂದು ಅಹೋರಾತ್ರಿ ಧರಣಿ ಸತ್ಯಾಗ್ರಹ



ಹರಿಹರ, ಡಿ. 25 - ತಾಲ್ಲೂಕಿನ ಭಾನುವಳ್ಳಿ ಹಾಗೂ ಕಡ್ಲೆಗೊಂದಿ ಗ್ರಾಮಗಳಲ್ಲಿರುವ ಸರ್ಕಾರಿ ಜಾಗದಲ್ಲಿ ನಿರ್ವಸತಿಗರಾದ ಮಾದಿಗ ಸಮುದಾಯದವರಿಗೆ ವಸತಿ ಯೋಜನೆ ರೂಪಿಸಲು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ. ಕೃಷ್ಣಪ್ಪ ಸ್ಥಾಪಿತ) ಹರಿಹರ ತಾಲ್ಲೂಕು ಘಟಕದಿಂದ ನಾಳೆ ದಿನಾಂಕ 26 ರಿಂದ ಅಹೋರಾತ್ರಿ ಧರಣಿ ಸತ್ಯಾಗ್ರಹವನ್ನು ಹರಿಹರದ ಗಾಂಧಿ ವೃತ್ತದಲ್ಲಿ ನಡೆಸಲಾಗುವುದೆಂದು ಸಮಿತಿಯ ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ತಿಳಿಸಿದ್ದಾರೆ.

ಭಾನುವಳ್ಳಿಯಲ್ಲಿ ಅಂದಾಜು 100 ಮಾದಿಗ ಸಮುದಾಯಕ್ಕೆ ಸೇರಿದ ಕುಟುಂಬಗಳು ಚಿಕ್ಕ, ಪುಟ್ಟ ಗುಡಿಸಲು, ನೆರಿಕೆ ಮನೆಗಳಲ್ಲಿ ಅನಾರೋಗ್ಯಕರ, ಅನಾಗರಿಕ ವಾತಾವರಣದಲ್ಲಿ ಹಲವು ದಶಕಗಳಿಂದ ವಾಸ ಮಾಡುತ್ತಿದ್ದಾರೆ.


ಗ್ರಾಮದ ಸರ್ವೆ ನಂ. 239/22ರಲ್ಲಿ 2.27 ಎಕರೆ ಎ.ಕೆ. ಸರ್ವೀಸ್ ಇನಾಮ್ ಜಮೀನಿನಲ್ಲಿ ಸದರಿ ಕುಟುಂಬಗಳಿಗೆ ವಸತಿ ಸೌಲಭ್ಯ ಒದಗಿಸಲು ಆಗ್ರಹಿಸಿ ಭಾನುವಳ್ಳಿ ಗ್ರಾಮದಿಂದ ಹರಿಹರದ ತಾಲ್ಲೂಕು ಕಚೇರಿವರೆಗೆ 12 ಕಿ.ಮೀ. ಎಲ್ಲಾ ನಿವಾಸಿಗಳೊಂದಿಗೆ ಪಾದಯಾತ್ರೆ ಮಾಡಿ ಆಡಳಿತಗಾರರ ಗಮನ ಸೆಳೆಯಲಾಗಿತ್ತು. ಆಗ ಈ ಸಮಸ್ಯೆಯನ್ನು ಒಂದು ತಿಂಗಳಲ್ಲಿ ಬಗೆಹರಿಸುವುದಾಗಿ ಸಂಬಂಧಿತ ಅಧಿಕಾರಿಗಳು ನೀಡಿದ್ದ ಭರವಸೆ ಈವರೆಗೂ ಈಡೇರಿಲ್ಲ. 2.27 ಎಕರೆ ಎ.ಕೆ. ಸರ್ವೀಸ್ ಇನಾಂ ಜಮೀನನ್ನು ನಿವೇಶನಕ್ಕೆಂದು ಕಾಯ್ದಿರಿಸಲು ಉಪ ವಿಭಾಗಾಧಿಕಾರಿಗಳಿಗೆ ಪ್ರಾಸ್ತಾವನೆ ಸಲ್ಲಿಸಿದ್ದರೂ ಸರ್ವೆ ದಾಖಲೆಗಳಲ್ಲಿನ ಲೋಪದೋಷಗಳಿಂದ ಆ ಕಡತ ವಿಲೇವಾರಿಯಲ್ಲಿ ಪ್ರಗತಿ ಕಾಣುತ್ತಿಲ್ಲ.

ಕಡ್ಲೇಗೊಂದಿ ಗ್ರಾಮದಲ್ಲಿ ಮಾದಿಗ ಸಮುದಾಯದ 100ಕ್ಕೂ ಹೆಚ್ಚು ಕುಟುಂಬಗಳಿವೆ. ಆದರೆ ಮನೆಗಳ ಕೊರತೆಯಿಂದಾಗಿ ಒಂದು ಆಶ್ರಯ ಮನೆಯಲ್ಲಿ ಮೂರು, ನಾಲ್ಕು ಕುಟುಂಬಗಳು ವಾಸಿಸುವ ದುಸ್ಥಿತಿ ಎದುರಾಗಿದೆ. ಹೀಗಾಗಿ ಗ್ರಾಮದಲ್ಲಿ ಲಭ್ಯ ಇರುವ ಸರ್ಕಾರಿ ಜಮೀನಿನಲ್ಲಿ (ಸರ್ವೆ ನಂ.37) ಅರ್ಹ ಬಡ ದಲಿತ ಕುಟುಂಬದವರಿಗೆ ವಸತಿ ಸೌಲಭ್ಯ ಒದಗಿಸಬೇಕಿದೆ ಎಂದು ಅವರು ತಿಳಿಸಿದ್ದಾರೆ.

**ಭಾನುವಳ್ಳಿಯಲ್ಲಿ ಸಭೆ :** ಸೋಮವಾರ ಭಾನುವಳ್ಳಿ ಗ್ರಾಮದಲ್ಲಿ ನಿರ್ವಸತಿಗರ ಸಭೆಯನ್ನು ನಡೆಸಲಾಗಿದ್ದು, ಸಭೆಯಲ್ಲಿ ಪ್ರತಿಭಟನೆಯನ್ನು ಮತ್ತಷ್ಟು ಕಠಿಣವಾಗಿ ನಡೆಸಲು ನಿಶ್ಚಯಿಸಲಾಯಿತು. ಸಭೆಯಲ್ಲಿ ಪಿ.ಜೆ. ಮಹಾಂತೇಶ್, ಲಕ್ಷ್ಮಣ, ಕೆಂಚಪ್ಪ, ಅಣ್ಣಪ್ಪ, ಚೌಡಮ್ಮ, ಹೊನ್ನಮ್ಮ, ಗಿಡ್ಡ ಹನುಮಮ್ಮ, ಮಲ್ಲಮ್ಮ ದೂಳೆಹೊಳೆ, ಬಸಣ್ಣಿ, ಭಾಗ್ಯಮ್ಮ, ಚೌಡಮ್ಮ , ಸಾವಿತ್ರಮ್ಮ, ಹಳದಪ್ಪ ಹಾಗೂ ಇತರರಿದ್ದರು.

# ವೋಟಿನ ಬೆಳೆಗಾಗಿ ಟೀಕೆಯ ಮಳೆ...!

## ತಮಿಳುನಾಡಿನ ದ್ರಾವಿಡೀಯರ ವರಸೆ



ಡಿ.ಎಂ.ಕೆ.ಯ ಮಹಾನ್ ನಾಯಕರು ಹಿಂದುತ್ವವಾದಿಗಳು ಹಾಗೂ ಹಿಂದಿ ಭಾಷಿಗರ ಕುರಿತು ನೀಡುತ್ತಿರುವ ಹೇಳಿಕೆಗಳು ಇತ್ತೀಚೆಗೆ ವೈರಲ್ ಆಗುತ್ತಿವೆ. ಅದರ ಸಾಲಿಗೆ ಇತ್ತೀಚಿನ ಸೇರ್ಪಡೆ ಎಂದರೆ ಡಿ.ಎಂ.ಕೆ. ಸಂಸದ ದಯಾನಿಧಿ ಮಾರನ್.

ಹಿಂದಿ ಹಾಗೂ ಇಂಗ್ಲಿಷ್ ಭಾಷಾ ಸಾಮರ್ಥ್ಯವನ್ನು ಹೋಲಿಕೆ ಮಾಡಿದ್ದ ಅವರು, ಇಂಗ್ಲಿಷ್ ಕಲಿತವರು ಐ.ಟಿ. ಉದ್ಯೋಗಕ್ಕೆ ಹೋಗುತ್ತಾರೆ. ಹಿಂದಿ ಕಲಿತವರು ತಮಿಳುನಾಡಿನಲ್ಲಿ ಶೌಚಾಲಯ ಸ್ವಚ್ಛಗೊಳಿಸುತ್ತಾರೆ ಎಂದಿದ್ದರು. ಐದು ವರ್ಷಗಳ ಹಿಂದಿನದ್ದು ಎನ್ನಲಾದ ಈ ಹೇಳಿಕೆ ಈಗ ವೈರಲ್ ಆಗಿ ರಾಜಕೀಯ ಬಿಸಿ ಏರಿಸುತ್ತಿದೆ. ಇಂಗ್ಲಿಷ್ - ಹಿಂದಿ ಓಕೆ, ತಮಿಳಷ್ಟೇ ಕಲಿತವರು ಏನಾಗಿದ್ದಾರೆ ಎಂಬುದರ ಬಗ್ಗೆ ಮಾರನ್ ಅಭಿಪ್ರಾಯ ಏನೆಂಬುದು ಸ್ಪಷ್ಟವಾಗಿಲ್ಲ.

ಹಿಂದಿ ಹೇರಿಕೆ ವಿರೋಧಿಸುವುದು ತಮಿಳುನಾಡಿನ ರಾಜಕಾರಣಿಗಳಿಗೆ ಸದಾ ಫಲ ನೀಡುವ ಕಲ್ಪವೃಕ್ಷದಂತೆ. ಹಿಂದಿ ವಿರೋಧಿಸಿದಷ್ಟು ತಮಿಳುನಾಡಿನಲ್ಲಿ ವೋಟುಗಳ ಬೆಳೆ ಹೆಚ್ಚು. ಅದರ ಮುಂದುವರೆದ ಭಾಗವೇನೋ ಎಂಬಂತೆ ಹಿಂದಿ ಭಾಷಿಗರ ರಾಜ್ಯಗಳು ಹಾಗೂ ಅಲ್ಲಿನ ಜನರನ್ನೇ ಈಗ ಟೀಕಿಸಲಾಗುತ್ತಿದೆ. ಕೆಲವೇ ದಿನಗಳ ಹಿಂದಷ್ಟೇ, ಡಿ.ಎಂ.ಕೆ. ಸಂಸದ ಸೆಂತಿಲ್ ಕುಮಾರ್ ಅವರು ಹಿಂದಿ ನಾಡಿನ ರಾಜ್ಯಗಳನ್ನು ಗೋಮೂತ್ರ ರಾಜ್ಯಗಳು ಎಂದಿದ್ದರು.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಸುಪುತ್ರ ಉದಯನಿಧಿ ಅವರು ಸನಾತನ ಧರ್ಮವನ್ನು ರೋಗಗಳಿಗೆ ಹೋಲಿಸಿದ್ದರು. ಈ ಹೋಲಿಕೆಗೆ 'ಪ್ರಗತಿಪರ ಚಿಂತನೆ'ಯ ಹಲವರು ಉತ್ಸಾಹದಿಂದ ಬೆಂಬಲಿಸಿದ್ದೂ ಉಂಟು. ಆದರೆ, ಹಿಂದಿ ಭಾಷಿಗರ ಇಡೀ ರಾಜ್ಯಗಳನ್ನು ಸಾರಾಸಗಟಾಗಿ ನಿಂದಿಸುವ ಹೇಳಿಕೆಗಳಿಗೆ ಪ್ರಗತಿಪರರಿಂದ ಅಂತಹ ಉತ್ಸಾಹದ ಸ್ಪಂದನೆಯೇನೂ ಸಿಕ್ಕಿಲ್ಲ.

ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಉತ್ತರದ ರಾಜ್ಯಗಳಲ್ಲಿ ಗೆದ್ದು, ದಕ್ಷಿಣದ ತೆಲಂಗಾಣದಲ್ಲಿ ಸೋತ ನಂತರವಂತೂ ಉತ್ತರ ಭಾರತದವರನ್ನು ಟೀಕಿಸುವ ಕೆಲವರಲ್ಲಿ ಉತ್ಸಾಹ ಹೆಚ್ಚಾಗುತ್ತಿದೆ. ಇಂಥವರ ಪ್ರಕಾರ ದಕ್ಷಿಣದ ರಾಜ್ಯಗಳು ಪ್ರಗತಿಪರವಾಗಿದ್ದರೆ, ಉತ್ತರದ ರಾಜ್ಯಗಳು ಪ್ರಗತಿಹೀನವಾಗಿವೆ.

ಆದರೆ, ವಾಸ್ತವ ಪರಿಸ್ಥಿತಿ ಹೇಗಿದೆ? ಇತ್ತೀಚಿನ ವರದಿಗಳ ಪ್ರಕಾರ ತಮಿಳುನಾಡಿನ ತಲಾ ವರಮಾನ 3,08,020 ರೂಪಾಯಿ ಆಗಿದೆ. ಇಡೀ ದೇಶದಲ್ಲಿ ತಲಾ ವರಮಾನದಲ್ಲಿ ತಮಿಳುನಾಡು ಹತ್ತನೇ ಸ್ಥಾನದಲ್ಲಿದೆ!

ಕೇಂದ್ರ ಶಿಕ್ಷಣ ಸಚಿವಾಲಯದ ಪ್ರಕಾರ ದೇಶದಲ್ಲಿ ಶೈಕ್ಷಣಿಕವಾಗಿ ಹಿಂದುಳಿದ 374 ಜಿಲ್ಲೆಗಳಿವೆ. ಈ ವರದಿಯ ಪ್ರಕಾರ, ತಮಿಳುನಾಡಿನ 38 ಜಿಲ್ಲೆಗಳ ಪೈಕಿ 27 ಶೈಕ್ಷಣಿಕವಾಗಿ ಹಿಂದುಳಿದಿವೆ. ಇಷ್ಟಾದರೂ, ತಮಿಳುನಾಡಿನ ದ್ರಾವಿಡೀಯರು ತಮ್ಮ ರಾಜ್ಯ ಸುಖದ ಸುಪ್ಪತ್ತಿನಲ್ಲಿ ತೇಲುತ್ತಿದೆಯೇನೋ ಎಂಬಂತೆ ವರ್ತಿಸುತ್ತಿದ್ದಾರೆ.

ಇನ್ನು ಕರ್ನಾಟಕ ಐ.ಟಿ. ಸಾಧನೆಗಾಗಿ ಹೆಗ್ಗಳಿಕೆ ಪಡೆದಿದೆ. ಈ ರಾಜ್ಯದ ಕಲ್ಯಾಣ ಕರ್ನಾಟಕದ ಜಿಲ್ಲೆಗಳು ಅತಿ ಹಿಂದುಳಿದ 371ಜೆ ಹಣೆಪಟ್ಟಿ ಪಡೆದಿವೆ. ಉತ್ತರ ಕರ್ನಾಟಕದ ಜಿಲ್ಲೆಗಳ ಹಿಂದುಳಿದಿರುವ ವ್ಯಥೆಯ ಬಗ್ಗೆ ವಿಧಾನಸಭೆಯಲ್ಲಿ ಇತ್ತೀಚೆಗಷ್ಟೇ ವಿವರವಾದ ಚರ್ಚೆಯೂ ನಡೆದಿದೆ.

ಪ್ರಗತಿಪರ ಎಂದು ಹೇಳಲಾಗುವ ಕೇರಳ ಉದ್ಯಮಶೀಲತೆಯಲ್ಲಿ ಹಿಂದೆ ಬಿದ್ದಿದೆ. ಅಲ್ಲಿನವರು ಉದ್ಯೋಗ ಅರಸಿ ಬೇರೆ ಬೇರೆ ರಾಜ್ಯ ಹಾಗೂ ದೇಶಗಳಿಗೆ ತೆರಳುವುದು ಹಿಂದಿನಿಂದಲೂ ನಡೆಯುತ್ತಾ ಬಂದಿದೆ.

ಹೀಗೆ ಪ್ರಗತಿಪರ ಎನ್ನಲಾಗುವ ದಕ್ಷಿಣದ ರಾಜ್ಯಗಳು ತಮ್ಮದೇ ಆದ ವ್ಯಥೆಗಳನ್ನು ಹೊಂದಿವೆ. ಇಷ್ಟಾದರೂ, ಹಿಂದಿ ನಾಡಿನವರ ಟೀಕೆಗಾಗಿ ಅನುಚಿತ ಭಾಷೆ ಬಳಸಲು ಸೋ ಕಾಲ್ಡ್ ದ್ರಾವಿಡವಾದಿಗಳು ಹಿಂಜರಿಯುವುದಿಲ್ಲ.

ಯಾವುದೇ ಪ್ರಾಂತ್ಯ ಪ್ರಗತಿ ಕಾಣಲು ಹಲವಾರು ಐತಿಹಾಸಿಕ ಕಾರಣಗಳಿರುತ್ತವೆ. ಉದಾಹರಣೆಗೆ ಕರ್ನಾಟಕದ ದಕ್ಷಿಣ ಭಾಗ ಪ್ರಗತಿ ಕಾಣಲು ಮೈಸೂರು ರಾಜರು ಪ್ರಮುಖ ಕೊಡುಗೆ ನೀಡಿದ್ದಾರೆ. ರಾಜಧಾನಿ ಬೆಂಗಳೂರು ಇದೇ ಭಾಗದಲ್ಲಿರುವುದೂ ಮತ್ತೊಂದು ಕಾರಣ. ಉತ್ತರ ಕರ್ನಾಟಕ ಇಂತಹ ಅವಕಾಶದಿಂದ ವಂಚಿತವಾಗಿದೆ. ತಮಿಳುನಾಡಿನ ವೇಗದ ಬೆಳವಣಿಗೆಗೆ ಬ್ರಿಟಿಷರ ಕೃಪಾಕಟಾಕ್ಷ ಒಂದು ಕಾರಣ. ಪಂಜಾಬ್ ಬೆಳವಣಿಗೆಗೆ ಹಸಿರು ಕ್ರಾಂತಿ ನೆರವಾಗಿತ್ತು.

ಹಾಗೆಯೇ ಹಿಂದುಳಿದಿರುವಿಕೆಗೂ ಹಲವಾರು ಐತಿಹಾಸಿಕ ಕಾರಣಗಳಿವೆ. ಇದಕ್ಕಾಗಿ ಅಲ್ಲಿನ ಈಗಿನ ಜನರನ್ನು ಅವಹೇಳನ ಮಾಡುವುದು ಅದ್ಯಾವ ಸೀಮೆಯ ದ್ರಾವಿಡ ಪ್ರಗತಿಪರ ಚಿಂತನೆಯೋ ಗೊತ್ತಿಲ್ಲ. ಮತಬ್ಯಾಂಕಿಗಾಗಿ ತನ್ನ ಬಣ್ಣಿಸಿ ಇತರರ ಹಳಿಯುವ ಧೋರಣೆಯೇ ದ್ರಾವಿಡವಾದವೇ? ಗೊತ್ತಿಲ್ಲ. ಸದ್ಯಕ್ಕೆ ಇಂತಹ ದ್ರಾವಿಡೀಯರನ್ನು ಐ.ಎನ್.ಡಿ.ಐ.ಎ. ಸೆರಗಲ್ಲಿ ಕಟ್ಟಿಕೊಂಡಿದ್ದಕ್ಕೆ ಹಿಂದಿ ನಾಡಿನಲ್ಲಿ ಪ್ರಮುಖ ಬೇರು ಹೊಂದಿರುವ ಕಾಂಗ್ರೆಸ್ ಯಾವ ರೀತಿಯ ಬೆಲೆ ತೆರಬೇಕಾಗುತ್ತದೆ ಎಂಬುದನ್ನು ಮುಂಬರುವ ದಿನಗಳು ಹೇಳಲಿವೆ.

**- ಎಸ್.ಎ. ಶ್ರೀನಿವಾಸ್**

## ಮಕ್ಕಳ ಶಿಕ್ಷಣದ ಬಗ್ಗೆ ಕಾಳಜಿ ವಹಿಸಿ: ಪ್ರೊ.ಗುಡಸಿ

ದಾವಣಗೆರೆ, ಡಿ.26- ವೀರಶೈವ-ಲಿಂಗಾಯತ ಸಮಾಜದವರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚು ಕಾಳಜಿ ವಹಿಸುವ ಅಗತ್ಯವಿದೆ ಎಂದು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಡಾ.ಕೆ.ಬಿ. ಗುಡಸಿ ಅಭಿಪ್ರಾಯಿಸಿದರು.

ಇಲ್ಲಿನ ಎಂ.ಬಿ.ಎ. ಕಾಲೇಜು ಆವರಣದಲ್ಲಿ ನಡೆಯುತ್ತಿರುವ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ 24 ನೇ ಮಹಾ ಅಧಿವೇಶನದಲ್ಲಿ ಶೈಕ್ಷಣಿಕ ಅಧಿವೇಶನದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಜಮೀನು ಇದೆ. ಮಕ್ಕಳು ನೋಡಿಕೊಳ್ಳುತ್ತಾರೆ ಎಂದು ರೈತಾಪಿ ವರ್ಗ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ತಾತ್ಸಾರ ಮಾಡುತ್ತದೆ. ಆದರೆ ಇರುವಷ್ಟು ಭೂಮಿಯನ್ನು ಎಷ್ಟು ಜನರಿಗೆ ಹಂಚಲು ಸಾಧ್ಯ? ಈ ನಿಟ್ಟಿನಲ್ಲಿ ಉತ್ತಮ ಶಿಕ್ಷಣ ಕೊಡಿಸಲು ಮುಂದಾಗಬೇಕು. ಆಗ ಮಾತ್ರ ಸಮಾಜವೂ ಪ್ರಗತಿ ಹೊಂದಲು ಸಾಧ್ಯ ಎಂದು ಹೇಳಿದರು.

ದಾವಣಗೆರೆ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ಡಿ. ಕುಂಬಾರ ಮಾತನಾಡಿ, ಶೈಕ್ಷಣಿಕ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ವೀರಶೈವ ಮಠಗಳು ಹಾಗೂ ಸಂಸ್ಥೆಗಳನ್ನು ಇಂದು ಜಗತ್ತೇ ನಿಬ್ಬೆರಗಾಗಿ ನೋಡುತ್ತಿದೆ ಎಂದು ಹೇಳಿದರು.

ವೈದ್ಯಕೀಯ, ಇಂಜಿನಿಯರಿಂಗ್ ಸೇರಿದಂತೆ ಎಲ್ಲಾ ವಿಭಾಗಗಳಲ್ಲೂ ಸಂಸ್ಥೆಗಳೂ ಪ್ರಗತಿಯ ಹಾದಿಯಲ್ಲಿದ್ದು, ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರು. ಮಕ್ಕಳನ್ನು ಶಾಲೆಗೆ ಕಳುಹಿಸಿದರೆ ತಮ್ಮ ಕರ್ತವ್ಯ ಮುಗಿಯಿತು ಎಂದು ಪೋಷಕರು ಭಾವಿಸದೆ, ಗುಣಮಟ್ಟದ ಶಿಕ್ಷಣ ಕೊಡಿಸುವತ್ತ ಗಮನ ಹರಿಸಬೇಕು ಎಂದು ಹೇಳಿದರು.

ನಮ್ಮ ಕರ್ಮಫಲಗಳಿಗೆ ಅನುಗುಣವಾಗಿ ನಮಗೆ ಸಂಪತ್ತು ಸಿಗುತ್ತದೆ. ನಾವು ಗಳಿಸುವ ಸಂಪತ್ತನ್ನು ಕಳ್ಳರು ದೋಚಬಹುದು. ಆದರೆ ವಿದ್ಯಾ ಸಂಪತ್ತನ್ನು ಮಾತ್ರ ಯಾರೂ ದೋಚಲಾಗದು. ಈ ಹಿನ್ನೆಲೆಯಲ್ಲಿ ಶಿಕ್ಷಣಕ್ಕೆ ಆದ್ಯತೆ ನೀಡಿ ಎಂದು ಪೋಷಕರಿಗೆ ಕಿವಿ ಮಾತು ಹೇಳಿದರು.

ಉದ್ಯಮಿ ಬಿ.ಸಿ. ಉಮಾಪತಿ ಅಧ್ಯಕ್ಷತೆ ವಹಿಸಿದ್ದರು. ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷ ವೀರಣ್ಣ ಚರಂತಿಮಠ, ಡಾ. ಡಿ.ವಿ. ಪರಶಿವಮೂರ್ತಿ, ಡಾ. ಬಿ.ಎಲ್. ಪಾಟೀಲ್, ಶಾಸಕರಾದ ಹಂಪನಗೌಡ ಬಾದರ್ಲಿ, ಜಿ.ಎಸ್. ಪಾಟೀಲ್, ಶರಣಗೌಡ ಕಂದಕೂರ ಮತ್ತಿತರರಿದ್ದರು.

## ವಿಷಾಹಾರದಿಂದ ಓರ್ವ ಮಹಿಳೆ ಸಾವು : ಹಲವರು ಅಸ್ವಸ್ಥ

ಬೆಂಗಳೂರು, ಡಿ. 25 - ಬೆಂಗಳೂರು ಗ್ರಾಮಾಂತರ ವ್ಯಾಪ್ತಿಯ ಹೊಸಕೋಟೆಯಲ್ಲಿ ಸೇವಿಸಿದ ಆಹಾರ ವಿಷವಾಗಿ ಮಹಿಳೆಯೊಬ್ಬರು ಸಾವನ್ನಪ್ಪಿದ್ದು, 70 ಮಂದಿ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ದೇವಸ್ಥಾನದ ಪ್ರಸಾದ ಸೇವಿಸಿ ಅಸ್ವಸ್ಥರಾಗಿ ಹೊಸಕೋಟೆಯ ಸಿಲಿಕಾನ್ ಸಿಟಿ ಆಸ್ಪತ್ರೆಗೆ ದಾಖಲಾಗಿದ್ದ 60 ವರ್ಷದ ಸಿದ್ದಗಂಗಮ್ಮ ಸಾವನ್ನಪ್ಪಿದ್ದಾರೆ. ಇನ್ನ ಹಲವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ವೈಕುಂಠ ಏಕಾದಶಿ ಮತ್ತು ಹನುಮ ಜಯಂತಿ ದಿನದಂದು ವಿವಿಧ ದೇಗುಲಗಳಲ್ಲಿ ಪ್ರಸಾದ ಸೇವಿಸಿದ್ದು ಅಸ್ವಸ್ಥರಾಗಿದ್ದಾರೆ.

# ಐಟಿಐ ಕಾಲೇಜು ವಿದ್ಯಾರ್ಥಿ ಸಂಘ ಉಪಹಾರ ಗೃಹ ಉದ್ಘಾಟನೆ



ದಾವಣಗೆರೆ, ಡಿ.25- ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) ವಿದ್ಯಾರ್ಥಿ ಸಂಘ ಹಾಗೂ ಉಪಹಾರ ಗೃಹವನ್ನು ಶುಕ್ರವಾರ ಮಹಾನಗರ ಪಾಲಿಕೆ ಉಪ ಮೇಯರ್ ಶ್ರೀಮತಿ ಯಶೋಧ ಯಗ್ಗಪ್ಪ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಐಟಿಐ ಕಾಲೇಜಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಓದುತ್ತಿರುವುದು ಖುಷಿಯ ವಿಚಾರ. ವಿದ್ಯಾರ್ಥಿಗಳು ನಿಷ್ಠೆ ಹಾಗೂ ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡಿ ಸ್ವಾವಲಂಬಿ ಜೀವನ ನಡೆಸುವಂತೆ ಕರೆ ನೀಡಿದರು.

ಮಹಾನಗರ ಪಾಲಿಕೆ ಸದಸ್ಯ ಎಲ್.ಡಿ. ಗೋಣೆಪ್ಪ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಅನಾರೋಗ್ಯದ ಸಮಸ್ಯೆಗಳು ಹೆಚ್ಚಾಗಿವೆ. ಆರೋಗ್ಯ ಕಾಪಾಡಿಕೊಳ್ಳುವತ್ತ ಎಲ್ಲರೂ ಗಮನ ಹರಿಸಬೇಕು. ನೂತನ ಉಪಹಾರ ಗೃಹದಲ್ಲಿ ಶುದ್ಧ ನೀರು, ಶುಚಿ-ರುಚಿಯಾದ ಆಹಾರ ದೊರೆಯುವಂತಾಗಲಿ ಎಂದು ಆಶಿಸಿದರು.

ಸಂಸ್ಥೆಯ ಪ್ರಾಚಾರ್ಯ ಏಕನಾಥ ಎನ್. ಪ್ರಾಸ್ತಾವಿಕವಾಗಿ ಮಾತನಾಡುತ್ತಾ, 1957ರಲ್ಲಿ ಆರಂಭವಾದ ಐಟಿಐ ಕಾಲೇಜು ರಾಜ್ಯದ ಪ್ರತಿಷ್ಠಿತ ಕಾಲೇಜುಗಳಲ್ಲೊಂದಾಗಿದೆ. 15 ವಿಭಾಗಗಳಲ್ಲಿ 700 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಇಲ್ಲಿ ಓದಿದ ವಿದ್ಯಾರ್ಥಿಗಳಿಗೆ ಸಾಕಷ್ಟು ಉದ್ಯೋಗಗಳು ಲಭ್ಯವಿರುವುದಾಗಿ ಹೇಳಿದರು.

ಕಾಲೇಜು ಅಧೀಕ್ಷಕ ಪ್ರಕಾಶ್ ಎಂ. ಮ್ಯಾಗೇರಿ, ತರಬೇತಿ ಅಧಿಕಾರಿ ಎಂ.ಎಸ್. ರಾಜು, ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಾದ ಜೆ.ಕೆ. ಜೀವನ್, ಆರ್. ಪುರುಷೋತ್ತಮ್, ಸಿ.ಹೆಚ್. ಪ್ರವೀಣ್, ಎಂ. ಪ್ರಿಯದರ್ಶಿನಿ ಉಪಸ್ಥಿತರಿದ್ದರು.

## ಖೋ-ಖೋ ಚಾಂಪಿಯನ್‌ಷಿಪ್‌ಗೆ ಕ್ರೀಡಾ ವಸತಿ ನಿಲಯದ ಪಟುಗಳು ಆಯ್ಕೆ



ದಾವಣಗೆರೆ, ಡಿ.25 - ಛತ್ತೀಸ್‌ಘಡದ ರಾಯಪುರದಲ್ಲಿ ನಾಳೆ ದಿನಾಂಕ 26 ರಿಂದ 30ರವರೆಗೆ ನಡೆಯಲಿರುವ 42ನೇ ಜ್ಯೂನಿಯರ್ ನ್ಯಾಷನಲ್ ಖೋ-ಖೋ ಚಾಂಪಿಯನ್‌ಷಿಪ್‌ಗೆ ನಗರದ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳಾದ ನಿಖಿಲ್, ಹುಲಗಪ್ಪ ಮತ್ತು ವೆಂಕಟೇಶ್ ಆಯ್ಕೆಯಾಗಿದ್ದಾರೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ.ಆರ್ ಜಯಲಕ್ಷ್ಮೀ ಬಾಯಿ ತಿಳಿಸಿದ್ದಾರೆ.

# ಜಿಲ್ಲೆಯಲ್ಲಿ ಕ್ರೀಡಾ ಶಾಲೆ, ನಿಲಯಗಳಿಗೆ ಆಯ್ಕೆ

ದಾವಣಗೆರೆ, ಡಿ. 25- ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ರಾಜ್ಯದ ವಿವಿಧ ಸ್ಥಳಗಳಲ್ಲಿ ನಡೆಸುತ್ತಿರುವ ಕ್ರೀಡಾ ಶಾಲೆ ಹಾಗೂ ಕ್ರೀಡಾ ನಿಲಯಗಳಿಗೆ ಪ್ರತಿಭಾವಂತ ಕ್ರೀಡಾಪಟುಗಳನ್ನು ಗುರುತಿಸಿ, ಆನಂತರ ವಿವಿಧ ಹಂತಗಳಲ್ಲಿ ಆಯ್ಕೆಯನ್ನು ನಡೆಸಿ, ಕ್ರೀಡಾ ಶಾಲೆ ಹಾಗೂ ನಿಲಯಗಳಿಗೆ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದು.

ಕ್ರೀಡಾ ಶಾಲೆ ದಾವಣಗೆರೆ, ಕಿರಿಯರ ವಿಭಾಗದಲ್ಲಿ ಕಬಡ್ಡಿ, ಕುಸ್ತಿ, ಅಥ್ಲೆಟಿಕ್ ಮತ್ತು ಖೋ-ಖೋ (ಬಾಲಕರು) ಕ್ರೀಡೆಗಳಿಗೆ ಭಾಗವಹಿಸುವವರು 2024ರ ಜೂನ್ ಮಾಹೆಗೆ 11 ವರ್ಷ ಮೀರಿರಬಾರದು ಮತ್ತು 5ನೇ ತರಗತಿ ಸೇರಲು ಅರ್ಹತೆ ಹೊಂದಿರಬೇಕು.

ಮೊದಲನೆ ಹಂತದಲ್ಲಿ ಕಿರಿಯರ ವಿಭಾಗದಲ್ಲಿ ಜೂಡೋ, ಕುಸ್ತಿ, ಅಥ್ಲೆಟಿಕ್ಸ್, ಹಾಕಿ, ಬ್ಯಾಸ್ಕೆಟ್‌ಬಾಲ್, ಫುಟ್‌ಬಾಲ್, ವಾಲಿಬಾಲ್, ಜಿಮ್ನಾಸ್ಟಿಕ್, ಈಜು (ಬಾಲಕ, ಬಾಲಕಿಯರು), ಕಬಡ್ಡಿ ಮತ್ತು ಖೋ-ಖೋ (ಬಾಲಕರು) ಕ್ರೀಡೆಗಳಿಗೆ ಪ್ರವೇಶ ಬಯಸುವ ಕ್ರೀಡಾ ಪಟುಗಳು 2024ರ ಜೂನ್ ಮಾಹೆಗೆ 14 ವರ್ಷ ಮೀರಿರಬಾರದು ಮತ್ತು 8ನೇ ತರಗತಿ ಸೇರಲು ಅರ್ಹತೆ ಹೊಂದಿರಬೇಕು.

ಹಿರಿಯರ ವಿಭಾಗದಲ್ಲಿ ಜೂಡೋ, ಕುಸ್ತಿ, ಅಥ್ಲೆಟಿಕ್ಸ್, ಹಾಕಿ, ಬ್ಯಾಸ್ಕೆಟ್ ಬಾಲ್, ಫುಟ್ ಬಾಲ್, ವಾಲಿಬಾಲ್, ಜಿಮ್ನಾಸ್ಟಿಕ್. (ಬಾಲಕ, ಬಾಲಕಿಯರು) ಕಬಡ್ಡಿ ಮತ್ತು ಖೋ-ಖೋ (ಬಾಲಕರು) ಕ್ರೀಡೆಗಳಿಗೆ ಪ್ರವೇಶ ಬಯಸುವ ಕ್ರೀಡಾಪಟುಗಳು 2024 ರ ಜೂನ್ ಮಾಹೆಗೆ 18 ವರ್ಷ ಮೀರಿರಬಾರದು ಮತ್ತು ಪ್ರಥಮ ಪಿ.ಯು.ಸಿ ತರಗತಿ ಸೇರಲು ಅರ್ಹತೆ ಹೊಂದಿರಬೇಕು.

ಜಿಲ್ಲೆಯ ವಿವಿಧ ತಾಲ್ಲೂಕು ಕೇಂದ್ರಗಳಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದು. ಇದೇ ದಿನಾಂಕ 28 ರಂದು ನ್ಯಾಮತಿ ತಾಲ್ಲೂಕಿಗೆ ಸಂಬಂಧಿಸಿದಂತೆ ನ್ಯಾಮತಿ ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಮತ್ತು ಹೊನ್ನಾಳಿ ತಾಲ್ಲೂಕಿಗೆ ಸಂಬಂಧಿಸಿದಂತೆ ಹೊನ್ನಾಳಿ ತಾಲ್ಲೂಕು ಕ್ರೀಡಾಂಗಣದಲ್ಲಿ, ಇದೇ ದಿನಾಂಕ 29 ರಂದು ಚನ್ನಗಿರಿ ತಾಲ್ಲೂಕಿಗೆ ಸಂಬಂಧಿಸಿದಂತೆ ಚನ್ನಗಿರಿ ತಾಲ್ಲೂಕು ಕ್ರೀಡಾಂಗಣ, ಜಗಳೂರು ತಾಲ್ಲೂಕಿಗೆ ಸಂಬಂಧಿಸಿದಂತೆ ತಾಲ್ಲೂಕಿನ ಬೇಡರ ಕಣ್ಣಪ್ಪ ಪ್ರೌಢ ಶಾಲೆ ಮೈದಾನ, ಇದೇ ದಿನಾಂಕ 30 ರಂದು ಹರಿಹರ ತಾಲ್ಲೂಕಿಗೆ ಸಂಬಂಧಿಸಿದಂತೆ ಹರಿಹರ ತಾಲ್ಲೂಕು ಕ್ರೀಡಾಂಗಣದಲ್ಲಿ ನಡೆಸಲಾಗುತ್ತದೆ.

ಜನವರಿ 1 ರಂದು ಕ್ರೀಡಾ ನಿಲಯದ ಜಿಲ್ಲಾ ಮಟ್ಟದ ಆಯ್ಕೆಗೆ ಹಾಗೂ ಜ. 2 ರಂದು ಜಿಲ್ಲಾ ಕ್ರೀಡಾ ವಸತಿ ಶಾಲೆಗೆ ಪ್ರವೇಶ ಪಡೆಯಲಿಚ್ಚಿಸುವ (ಕುಸ್ತಿ, ಕಬಡ್ಡಿ ಮತ್ತು ಖೋ-ಖೋ) 11 ವರ್ಷದೊಳಗಿನ ಬಾಲಕರ ಆಯ್ಕೆ ಪ್ರಕ್ರಿಯೆಯು ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ 9480796263 (ನ್ಯಾಮತಿ), 789264149 (ಹೊನ್ನಾಳಿ), 9480796263 (ಚನ್ನಗಿರಿ), 9972464313 (ಜಗಳೂರು), 94486 67255 (ಹರಿಹರ), 94486 67255, 94807 96263, 99724 64313, 91410 91590, 89713 88143 (ದಾವಣಗೆರೆ) ಮೊಬೈಲ್‌ಗೆ ಸಂಪರ್ಕಿಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಜಯಲಕ್ಷ್ಮಿ ಬಾಯಿ ತಿಳಿಸಿದ್ದಾರೆ.

## ಜಿಲ್ಲಾ ಉಪ್ಪಾರ ಸಂಘದಿಂದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ



ದಾವಣಗೆರೆ, ಡಿ.25- ಜಿಲ್ಲಾ ಉಪ್ಪಾರ ಸಂಘದಿಂದ 2022-23 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ. 85 ಕ್ಕಿಂತ ಹೆಚ್ಚು ಅಂಕ ಗಳಿಸಿದ ಜಿಲ್ಲೆಯ ಜಗಳೂರು, ಹರಿಹರ, ಚನ್ನಗಿರಿ, ದಾವಣಗೆರೆ, ಹೊನ್ನಾಳಿ ತಾಲ್ಲೂಕುಗಳ ಪ್ರತಿಭಾವಂತ ವಿದ್ಯಾರ್ಥಿ - ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಇದೇ ದಿನಾಂಕ 31 ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಉಪ್ಪಾರ ನೌಕರರ ಸಂಘದ ಅಧ್ಯಕ್ಷ ಎನ್.ಎಸ್. ಚಂದ್ರಪ್ಪ, ಕರ್ನಾಟಕ ರಾಜ್ಯ ಉಪ್ಪಾರ ಸಂಘದ ಗೌರವಾಧ್ಯಕ್ಷ ಎಸ್.ಬಸವರಾಜಪ್ಪ ತುರ್ಚಘಟ್ಟ, ಜಿಲ್ಲಾ ಭಗೀರಥ ಉಪ್ಪಾರ ಸಂಘದ ಗೌರವಾಧ್ಯಕ್ಷ ಹೆಚ್.ತಿಪ್ಪಣ್ಣ ತುರ್ಚಘಟ್ಟ ತಿಳಿಸಿದ್ದಾರೆ. ವಿವರಕ್ಕೆ ಎಂ.ಸಿ. ರಮೇಶ್ (94485 67515), ರಾಮಪ್ಪ (79750 78895, 94492 04792) ಅವರನ್ನು ಸಂಪರ್ಕಿಸಬಹುದು.


**ಸೈಟುಗಳು ಮಾರಾಟಕ್ಕಿವೆ**
ಶಕ್ತಿನಗರ ಪೂರ್ವ 40x30 ಅಕ್ಕ-ಪಕ್ಕ, ತರಳಬಾಳು ಬಡಾವಣೆ ಪಶ್ಚಿಮ 50x60 ಅಕ್ಕ-ಪಕ್ಕ, ಶಿವ-ಪಾರ್ವತಿ ಬಡಾವಣೆ ಪೂರ್ವ 30x55, 40x60, ಪಶ್ಚಿಮ 30x40, 30x55, ವಾಜಪೇಯಿ ಬಡಾವಣೆ ಪಶ್ಚಿಮ 30x47
ಐಗೂರು ವಿಜಯಕುಮಾರ್
99457 02495

**ಬೇಕಾಗಿದ್ದಾರೆ**
ಏರ್‌ಟೆಲ್ ಕಂಪನಿಯಲ್ಲಿ ಡಿಸ್ಟ್ರಿಬ್ಯೂಟರ್ ವತಿಯಿಂದ ಫೀಲ್ಡ್ ವರ್ಕ್ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ 10,000 ಹಾಗೂ ಇನ್‌ಸೆಂಟೀವ್ 15,000. ಸಂಪರ್ಕಿಸಿ.
91481 09998, 81054 84646

**ಸೈಟುಗಳು ಮಾರಾಟಕ್ಕಿವೆ**
ಪಿ.ಬಿ.ರಸ್ತೆಗೆ ಹತ್ತಿರ ಶನೇಶ್ವರ ದೇವಸ್ಥಾನ ಹಿಂಭಾಗ 30x50, 30x50 South ಅಕ್ಕ-ಪಕ್ಕ, 40 ಅಡಿ ರೋಡ್‌ಗಿದೆ. 30x40, 30x40 East ಅಕ್ಕ-ಪಕ್ಕ
ಐನಳ್ಳಿ ಚನ್ನಸಬಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಮಹಿಳೆಯರು, ಹುಡುಗರು, ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಂಪರ್ಕಿಸಿ
63635 43487

**ಮನೆ ಬಾಡಿಗೆಗೆ / ಸೈಟ್ ಮಾರಾಟಕ್ಕೆ**
ಪಿ.ಜೆ. ಬಡಾವಣೆಯಲ್ಲಿ ಮೊದಲನೇ ಮಹಡಿಯಲ್ಲಿರುವ 2 BHK ಮನೆ ಬಾಡಿಗೆಗೆ ಇದೆ. ಕುಂದುವಾಡ ಹತ್ತಿರ, ರಶ್ಮಿ ಹಿಂಭಾಗ, 1882 ಅಳತೆ ಪೂರ್ವ ಉತ್ತರ ಕಾರ್ನರ್ ಸೈಟ್ ಮಾರಾಟಕ್ಕಿದೆ. ದರ : 1650 ರೂ.
94482 48242, 78927 53714

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಮನೆ ಬಾಡಿಗೆಗೆ ಇದೆ**
ಸುಸಜ್ಜಿತವಾದ 2 BHK ಮನೆ. ವಿದ್ಯಾನಗರ, ನೂತನ ಕಾಲೇಜು ರಸ್ತೆ, ಕಾಮದೇನು ಹೋಟೆಲ್ ಹತ್ತಿರ.
ಮೊ : 97400 01129

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ, ವಾಜಪೇಯಿ ಬಡಾವಣೆಯ (ಪಕ್ಕ) ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ, ದರ ಒಂದು ಅಡಿಗೆ 3200 ರೂ. ಗಳಲ್ಲಿ ಲಭ್ಯ. 30x40 ಪಶ್ಚಿಮ, 30x40 ದಕ್ಷಿಣ, 30x50 ಪೂರ್ವ, 30x50 ಉತ್ತರ-ಪೂರ್ವ ಕಾರ್ನರ್
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ದಾವಣಗೆರೆಯ ಪ್ರತಿಷ್ಠಿತ ವಸತಿ ಶಾಲೆ/ ಕಾಲೇಜಿನಲ್ಲಿ ಕೆಲಸ ಮಾಡಲು ಪುರುಷರು/ಮಹಿಳೆಯರು ಬೇಕಾಗಿದ್ದಾರೆ. ಕುಟುಂಬವಿದ್ದರೆ ದಂಪತಿಗಳಿಗೆ ಆದ್ಯತೆ ನೀಡಲಾಗುವುದು. ಪರಸ್ಥಳದವರಿಗೆ ಉಚಿತ ಊಟ, ವಸತಿ ನೀಡಲಾಗುವುದು. ಆಸಕ್ತರು ತಮ್ಮ ವಿವರಗಳೊಂದಿಗೆ ಸಂಪರ್ಕಿಸಿ.
ರವಿ, 94800 24204
ಹರಿ, 87629 16967

**ಬೇಕಾಗಿದ್ದಾರೆ**
ಅಡುಗೆ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ಮತ್ತು ಮನೆ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ.
ಶಂಕರಲೀಲಾ ಗ್ಯಾಸ್ ಏಜೆನ್ಸಿ
ಕುವೆಂಪು ನಗರ, ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆ.
99164-54770

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಲೇಔಟ್‌ನಲ್ಲಿ 30x40 West, 40 ಅಡಿ ರೋಡ್‌ಗಿದೆ. MBA ಕಾಲೇಜಿ ರೋಡಿಗೆ 30x43 North ಕಮರ್ಷಿಯಲ್. 40x40 South ಡಾಲರ್ಸ್ ಕಾಲೋನಿಯಲ್ಲಿ
ಐನಳ್ಳಿ ಚನ್ನಸಬಪ್ಪ ಏಜೆಂಟ್
99166 12110


**ಮಾರಾಟಕ್ಕಿದೆ**
ಮಿಟ್ಲಕಟ್ಟೆಯಲ್ಲಿ 19 ಗುಂಟೆ ಗೋಡೌನ್ ಸಹಿತ ಜಾಗ ಮಾರಾಟಕ್ಕಿದೆ. ದಾವಣಗೆರೆ-ಮಲೇಬೆನ್ನೂರು ರೋಡ್.
91641 29236

**REQUIRED**
North Indian Chef Required for Restaurant
Contact :
99863 16672

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ವೃಷಭ್ ಮೆಡಿಕಲ್ಸ್**
ಹೋಲ್‌ಸೇಲ್ (ಸಗಟು) ಮತ್ತು ರೀಟೇಲ್ (ಚಿಲ್ಲರೆ) ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ.
99805 32781
ಜಾಲಿ ನಗರ, ಶಿವಾಲಿ ಟಾಕೀಸ್ ರಸ್ತೆ, ದಾವಣಗೆರೆ

**ಮನೆಗಳು ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆ ಪೂರ್ವ 30x45 (ಡುಪ್ಲೆಕ್ಸ್), ತರಳಬಾಳು ಬಡಾವಣೆ ದಕ್ಷಿಣ 30x60 (ಡುಪ್ಲೆಕ್ಸ್) ಎಸ್.ಎಸ್. ಬಿ ಬ್ಲಾಕ್, ದಕ್ಷಿಣ 30x40 ಡುಪ್ಲೆಕ್ಸ್, ಎಸ್.ಎಸ್. ಎ ಬ್ಲಾಕ್, ಪೂರ್ವ 40x60
ಐಗೂರು ವಿಜಯಕುಮಾರ್
99457 02495

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2&3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಲು SSLC/PUC ಪಾಸಾದ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ.
91106 21233

**ನುರಿತ ಡಿಟಿಪಿ ಆಪರೇಟರ್ ಬೇಕಾಗಿದ್ದಾರೆ**
ರಾಜು ಪ್ರಿಂಟರ್ಸ್
ಶಿವಪ್ಪಯ್ಯ ರಸ್ತೆ, ದಾವಣಗೆರೆ.
99640 28818

**ಕೇಬಲ್ ಹುಡುಗರು ಬೇಕಾಗಿದ್ದಾರೆ**
ಕೇಬಲ್ ಕೆಲಸ ಬರಬೇಕು. ಅಂತಹವರಿಗೆ ಮೊದಲ ಆದ್ಯತೆ. ಸಂಪರ್ಕಿಸಿ. :
99022 09820

**ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ**
ರಾಣೆಬೆನ್ನೂರಿನಲ್ಲಿ ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ. 30x20 ಅಡಿ ಹಲಗೇರಿ ರಸ್ತೆ. ಸಂಪರ್ಕಿಸಿ :
98445 34678

**WANTED**
Required Male Office Assistant
ANDANUR CHITS (R)
Ram & Co. Circle, Davanagere.

**ಮನೆ ಬಾಡಿಗೆಗೆ ಇದೆ**
ಸುಸಜ್ಜಿತವಾದ 2 ಬೆಡ್ ರೂಂ ಇರುವ ಮನೆ ಬಾಡಿಗೆಗೆ ಇದೆ.
ಬಾಡಿಗೆ : 7000, ಅಡ್ವಾನ್ಸ್ : 20,000
ವಿಳಾಸ : KBR Complex, RMC Link Road, Near BT Park, (Behind LIC office) TC Layout out Davanagere.
63621 47549, 99725 35329

**ಬೇಕಾಗಿದ್ದಾರೆ**
ಸೆಲ್ಫ್ ಸರ್ವೀಸ್ ಹೋಟೆಲ್‌ನಲ್ಲಿ ಕೌಂಟರ್ ಸಪ್ಲೈಯರ್ ಕೆಲಸಕ್ಕೆ ನುರಿತ ಯುವಕರು ಬೇಕಾಗಿದ್ದಾರೆ.
ಕೆಲಸದ ಸಮಯ : 3 PM to 10 PM
95388 96927

**ಬೇಕಾಗಿದ್ದಾರೆ**
ಲಾಡ್ಜ್‌ಗೆ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಿಗೆ ಸೂಪರ್‌ವೈಸರ್ ಮತ್ತು ರೂಂ ಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
63639-54459

**FLAT FOR LEASE**
2 BHK, North facing 1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ
**SSLC ನೇರ ಪರೀಕ್ಷೆ**
IInd PUC/Senior Secondary, Arts/Commerce/Science B.Sc.-Agriculture, B.Tech All branches, D.Pharma, B.Ed., PhD regular B.A., B.com., B.Sc., M.A., M.Com., MBA, MLIB, Correspondence.
ಆಸಕ್ತರು ಫೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿರಿ.
SS Global Institute for Higher Education
1982-1ನೇ ಮಹಡಿ, ಅನ್ವಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266

**SECURITY GUARD ಬೇಕಾಗಿದ್ದಾರೆ**
ಗ್ರಾನೈಟ್ ಶೋ ರೂಂ ಮತ್ತು ಹೋಟೆಲ್
70012 87756 97409 77785

**ಜನ್ಮಾಂತರ ಹಿಪ್ನೋ ರೇಕಿ ಚಿಕಿತ್ಸೆ**
ಎಲ್ಲಾ ರೀತಿಯ ದೈಹಿಕ ಮತ್ತು ಮಾನಸಿಕ ರೋಗಗಳು, ಎಲ್ಲೂ ಪರಿಹಾರವಾಗದ ನಿಮ್ಮ ಹಲವು ಸಮಸ್ಯೆಗಳು ಮತ್ತು ನಿಮ್ಮ ಹಿಂದಿನ ಜನ್ಮಗಳ ದೋಷಗಳ ಸಂಪೂರ್ಣ ನಿವಾರಣೆಗಾಗಿ ಕೂಡಲೇ ಸಂಪರ್ಕಿಸಿ.
80733 42011

**ಕಾರ್ ಡ್ರೈವರ್ ಬೇಕಾಗಿದ್ದಾರೆ**
ಲೈಸನ್ಸ್ ಹಾಗೂ ದ್ವಿಚಕ್ರ ವಾಹನ ಹೊಂದಿರುವ ಕಾರ್ ಡ್ರೈವರ್ ತಕ್ಷಣ ಬೇಕಾಗದ್ದಾರೆ. ಸಂಪರ್ಕಿಸಿ :
94486 56091
(ಮೇಲ್ಕಂಡ ನಂಬರ್‌ಗೆ ಈ ಹಿಂದೆ ಕರೆ ಮಾಡಿದವರು ಪುನಃ ಕರೆ ಮಾಡಬೇಡಿ)

**ತಕ್ಷಣ ಬೇಕಾಗಿದ್ದಾರೆ**
ಸೌತ್ ಇಂಡಿಯನ್ ಅಡುಗೆ ಭಟ್ಟರು (ಕುಕ್) ಸಪ್ಲೈಯರ್ ಅನುಭವ ಇರುವವರಿಗೆ ಆಕರ್ಷಕ ವೇತನ ಕೊಡಲಾಗುವುದು. ಹೋಟೆಲ್ ಪೂಜಾ ಇಂಟರ್ ನ್ಯಾಷನಲ್, ಪಿ.ಬಿ.ರಸ್ತೆ, ದಾವಣಗೆರೆ.
88846 30532, 96060 96697
81055 47878

## ನಗರದ ರಸ್ತೆಯಲ್ಲಿಯೇ ಉಳಿದ ಡಿವೈಡರ್‌ನ ಕಬ್ಬಿಣದ ಮೊಳೆಗಳು



ದಾವಣಗೆರೆ, ಡಿ.25- ಲೋಕೋಪಯೋಗಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ವ್ಯಾಪ್ತಿಯ ರಸ್ತೆಗಳಲ್ಲಿ ಕಬ್ಬಿಣದ ಬ್ಯಾರಿಕೇಡ್ ಡಿವೈಡರ್‌ಗಳನ್ನು ಅಳವಡಿಸಲಾಗಿತ್ತು.

ಈ ಡಿವೈಡರ್‌ಗಳ ಪೈಕಿ ಕೆಲವು ಇದ್ದರೆ ಮತ್ತೆ ಕೆಲವು ಕಿತ್ತು ಹೋಗಿವೆ. ಆದರೆ, ಅವುಗಳನ್ನು ಅಳವಡಿಸಲು ಹಾಕಲಾಗಿದ್ದ ಮೊಳೆಗಳು ರಸ್ತೆಯಲ್ಲಿಯೇ ಇರುವುದರಿಂದ ವಾಹನದ ಟಯರ್ ಗಳಿಗೆ ಹಾನಿಯಾಗುತ್ತಿದೆ ಎಂದು ಸಾಮಾಜಿಕ ಕಾರ್ಯಕರ್ತ ಎಂ.ಜಿ. ಶ್ರೀಕಾಂತ್ ದೂರಿದ್ದಾರೆ.

ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡಿರುವ ಅವರು, ಈ ಮೊಳೆಗಳನ್ನು ತೆಗೆಯಲು ತಾವು ಸಿದ್ಧರಿದ್ದು, ಅನುಮತಿ ನೀಡಬೇಕೆಂದೂ ತಿಳಿಸಿದ್ದಾರೆ.

## ಅಕ್ಕಮಹಾದೇವಿ ಸಮಾಜದಲ್ಲಿ ಹುಣ್ಣಿಮೆ



ದಾವಣಗೆರೆಯ ಶ್ರೀ ಅಕ್ಕಮಹಾದೇವಿ ಸಮಾಜದ ವತಿಯಿಂದ ಶ್ರೀ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ಇಂದು ಸಂಜೆ 5 ಗಂಟೆಗೆ ಹುಣ್ಣಿಮೆ ಕಾರ್ಯಕ್ರಮದಡಿಯಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಲಿದೆ.

ಹೊಸ್ತಿಲ ಹುಣ್ಣಿಮೆ ಮತ್ತು ಕ್ರಿಸ್‌ಮಸ್ ಕುರಿತು ಜಯದೇವಮ್ಮ ಪಂಡಿತ್ ಮತ್ತು ಶೋಭಾ ಕಣವಿ ಉಪನ್ಯಾಸ ನೀಡುವರು. ಶ್ರೀ ಅಕ್ಕಮಹಾದೇವಿ ಸಮಾಜದ ಅಧ್ಯಕ್ಷರಾದ ಶ್ರೀಮತಿ ಕೆ.ಕೆ. ಸುಶೀಲಮ್ಮ ಅಧ್ಯಕ್ಷತೆ ವಹಿಸಲಿದ್ದು, ಹಿರಿಯ ಸಾಹಿತಿ ಶ್ರೀಮತಿ ನೀಲಗುಂದ ಜಯಮ್ಮ ಚಿಂತನ - ಮಂತನ ಕಾರ್ಯಕ್ರಮವನ್ನು ನಡೆಸಿಕೊಡುವರು.

## ನಗರದಲ್ಲಿ ಇಂದು ವೀರಭದ್ರೇಶ್ವರ ಸ್ವಾಮಿ ಕಾರ್ತಿಕೋತ್ಸವ



ಹಳೇಪೇಟೆಯ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದು ರಾತ್ರಿ 10 ಗಂಟೆಗೆ ಕಾರ್ತಿಕ ದೀಪೋತ್ಸವ ಜರುಗಲಿದೆ. ಅಂದು ಸಂಜೆ 7ಕ್ಕೆ ಉತ್ಸವವು ದೇವಸ್ಥಾನದಿಂದ ಹೊರಟು, ರಾಜ ಬೀದಿಗಳಲ್ಲಿ ಸಂಚರಿಸಲಿದೆ.

## ಕೊಡದಗುಡ್ಡದಲ್ಲಿ ಇಂದು ಕಡೆ ಕಾರ್ತಿಕೋತ್ಸವ



ಜಗಳೂರು ತಾಲ್ಲೂಕಿನ ಕೊಡದಗುಡ್ಡದ ಶ್ರೀ ವೀರ ಭದ್ರಸ್ವಾಮಿಯ ಕಡೆ ಕಾರ್ತಿಕೋತ್ಸವವು ಇಂದು ಸಂಜೆ 7.30 ರಿಂದ ಪ್ರಾರಂಭವಾಗಿ ರಾತ್ರಿ 11ರವರೆಗೆ ನಡೆಯಲಿದೆ.

## ನಗರದಲ್ಲಿ ಇಂದು ಸಾಂಸ್ಕೃತಿಕ ಹಬ್ಬ

ಮಾಂಟೆಸೊರಿ ಕಾನ್ವೆಂಟ್‌ನ ವಾರ್ಷಿಕ ದಿನಾಚರಣೆ ಹಾಗೂ ಮಾಂಟೆಸೊರಿ ಕಲ್ಚರಲ್ ಫೆಸ್ಟ್ ಕಾರ್ಯಕ್ರಮವು ಇಂದು ಬೆಳಿಗ್ಗೆ 10 ಗಂಟೆಗೆ ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂದಿರದಲ್ಲಿ ನಡೆಯಲಿದೆ. ಅಧ್ಯಕ್ಷತೆಯನ್ನು ಹೆಚ್.ಬಿ. ನಾಗರಾಜ್ ವಹಿಸುವರು. ಮುಖ್ಯ ಅತಿಥಿಗಳಾಗಿ ಪುಷ್ಪಲತಾ, ಆರ್.ಜಿ. ಶ್ರೀನಿವಾಸ ಮೂರ್ತಿ ಆಗಮಿಸುವರು. ಕೆ.ಬಿ. ಕೊಟ್ರೇಶಪ್ಪ ಬಹುಮಾನ ವಿತರಿಸುವರು.

## ಆವರಗೊಳ್ಳದಲ್ಲಿ ಇಂದು ವೀರಭದ್ರೇಶ್ವರ ಕಾರ್ತಿಕ

ದಾವಣಗೆರೆ ಸಮೀಪದ ಶ್ರೀ ಕ್ಷೇತ್ರ ಆವರಗೊಳ್ಳ ಗ್ರಾಮದ ಶ್ರೀ ವೀರಭದ್ರೇಶ್ವರ ಮಹಾಸ್ವಾಮಿಯ ಕಡೇ ಕಾರ್ತಿಕೋತ್ಸವವು ಇಂದು ಜರುಗಲಿದೆ ಎಂದು ಶ್ರೀ ವೀರಭದ್ರೇಶ್ವರ ಮಹಾಸ್ವಾಮಿ ಸೇವಾ ಸಂಘದ ಅಧ್ಯಕ್ಷ ಬಿ.ಎಮ್. ಷಣ್ಮುಖಯ್ಯ ತಿಳಿಸಿದ್ದಾರೆ.

# ಮೌಢ್ಯದಿಂದ ಕೂಡಿದ ಹಬ್ಬ ಆಚರಣೆಗಳಿಂದ ದೂರವಿರಬೇಕು

### ಹೊನ್ನಾಳಿಯಲ್ಲಿನ ಕನಕ ಜಯಂತ್ಯೋತ್ಸವದಲ್ಲಿ ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಕರೆ



ಹೊನ್ನಾಳಿ, ಡಿ.25- ಕುರುಬ ಸಮಾಜ ಅಭಿವೃದ್ಧಿ ಕಾಣಬೇಕಾದರೆ ಮೊದಲು ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಮೌಢ್ಯದಿಂದ ಕೂಡಿದ ಹಬ್ಬಗಳ ಆಚರಣೆಯಿಂದ ದೂರವಿರಬೇಕು. ಪ್ರತಿ ಯೊಬ್ಬರೂ ಸ್ವಪ್ರತಿಷ್ಠೆ ತೊರೆದು ಸಂಘಟಿತರಾಗಬೇಕು ಎಂದು ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಕಿವಿಮಾತು ಹೇಳಿದರು.

ಪಟ್ಟಣದ ಕನಕ ರಂಗಮಂದಿರದ ಆವರಣದಲ್ಲಿ ಸೋಮವಾರ ಅವಳಿ ತಾಲ್ಲೂಕುಗಳ ಕುರುಬ ಸಮಾಜದ ವತಿಯಿಂದ ಇಂದು ಆಯೋಜಿಸಲಾಗಿದ್ದ ದಾಸ ಶ್ರೇಷ್ಠ ಕನಕದಾಸರ 536ನೇ ಜಯಂತ್ಯೋತ್ಸವ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಬಾಯಿ ಚಪಲ ತೀರಿಸುವ ಹಬ್ಬಗಳಿಗೆ ಬ್ರೇಕ್ ಹಾಕಬೇಕು. ಸಾಲ ಮಾಡಿ ಹಬ್ಬ ಆಚರಣೆಗಳನ್ನು ಮಾಡಬಾರದು. ಇದರಿಂದ ಸಮಾಜದ ಕುಟುಂಬಗಳು ಆರ್ಥಿಕವಾಗಿ ಹಿಂದುಳಿಯುವುದು ತಪ್ಪುತ್ತದೆ ಎಂದ ಅವರು, ಇಂತಹ ಅದ್ಧೂರಿ ಖರ್ಚುಗಳ ಹಬ್ಬಗಳ ಆಚರಣೆ ಕೈಬಿಟ್ಟು ಇದೇ ಹಣವನ್ನು ಮಕ್ಕಳ ಶಿಕ್ಷಣಕ್ಕೆ ಖರ್ಚು ಮಾಡಿದ್ದೇ ಆದಲ್ಲಿ ಇಡೀ ಸಮಾಜ ಉನ್ನತ ಸ್ಥಿತಿಗೆ ತಲುಪುವಲ್ಲಿ ಯಾವುದೇ ಅನುಮಾನವಿಲ್ಲ ಎಂದು ಹೇಳಿದರು.

ಮಾಜಿ ಸಚಿವ ಎಚ್.ಎಂ. ರೇವಣ್ಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, 'ಹಿಂಡನ್ನಗಲಿದ ಗೋವು ಹುಲಿಗೆ ಮೇವು' ಎನ್ನುವ ಸ್ಥಿತಿಗೆ ಹೊನ್ನಾಳಿ ಕುರುಬ ಸಮಾಜದ ಪರಿಸ್ಥಿತಿಯಾಗಿದೆ. ಒಗ್ಗಟ್ಟು ತೋರಿಸದಿದ್ದರೆ ಇದರ ಲಾಭವನ್ನು ಇತರರು ಪಡೆದು ತಮ್ಮ ಬೇಳೆ ಬೇಯಿಸಿ ಕೊಳ್ಳುತ್ತಾರೆ ಎಂದು ಎಚ್ಚರಿಸಿದರು.

ರಾಷ್ಟ್ರದ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಗುರುತಿಸಿಕೊಳ್ಳುತ್ತಿರುವ ಕುರುಬ ಸಮಾಜ ಸರಿಸುಮಾರು 12 ಕೋಟಿಗೂ ಅಧಿಕ ಸಂಖ್ಯೆಯಲ್ಲಿದೆ ಎಂದು ಹೇಳಿದರು.

ಸ್ವಾಗತ ಸಮಿತಿ ಅಧ್ಯಕ್ಷ ಹಾಗೂ ಸಮಾಜದ ಮುಖಂಡ ಎಚ್.ಬಿ.ಮಂಜಪ್ಪ ಮಾತನಾಡಿ, ಕನಕ ಜಯಂತಿಯ ಉದ್ದೇಶ ಸಮಾಜದ ಸಂಘಟನೆಗಾಗಿ ಮಾಡಲಾಗು ತ್ತಿದೆ. ಇದಕ್ಕೆ ಸಮಾಜದ ಪ್ರತಿಯೊಬ್ಬರೂ ಭಿನ್ನಾಭಿಪ್ರಾಯಗಳನ್ನು ಮರೆತು ಒಂದು ಗೂಡಿ ಸಮಾಜದ ಅಭಿವೃದ್ಧಿಗಾಗಿ ಕೆಲಸ ಮಾಡಬೇಕಾಗಿದೆ ಎಂದು ಹೇಳಿದರು.

ಶಾಸಕ ಡಿ.ಜಿ.ಶಾಂತನಗೌಡ, ಮಾಜಿ ಶಾಸಕರುಗಳಾದ ಎಂ.ಪಿ. ರೇಣುಕಾಚಾರ್ಯ, ಡಾ. ಡಿ.ಬಿ.ಗಂಗಪ್ಪ ಅವರು ಮಾತನಾಡಿ, ನಿವೇಶನದ ಬಗ್ಗೆ ನಾವು ಪ್ರಾಮಾಣಿಕ ಪ್ರಯತ್ನ ಮಾಡಿದ್ದು, ಕೆಲ ತಾಂತ್ರಿಕ ಕಾರಣಗಳಿಂದಾಗಿ ವಿಳಂಬವಾಗಿದೆ ಎಂದು ಹೇಳಿದರು.

ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷೆ ಶ್ರೀದೇವಿ ಧರ್ಮಪ್ಪ ಸೇರಿದಂತೆ, ಹಲವು ಮುಖಂಡರು ಮಾತನಾಡಿದರು.

ಸಮಾರಂಭದಲ್ಲಿ ಅವಳಿ ತಾಲ್ಲೂಕುಗಳ ಸಮಾಜದ ಅಧ್ಯಕ್ಷ ಎಂ.ಸಿ. ಮೋಹನ್, ಎಂ.ಆರ್.ಮಹೇಶ್, ಧರ್ಮಪ್ಪ, ಎಚ್.ಬಿ.ಗಿಡ್ಡಪ್ಪ, ಎಚ್.ಬಿ. ಅಣ್ಣಪ್ಪ, ಎಚ್.ಎ. ರಾಜಪ್ಪ, ತೆಂಗಿನಮರದ ಮಾದಪ್ಪ, ಸಮಾಜದ ಗೌರವಾಧ್ಯಕ್ಷ ಪ್ರಕಾಶ್ ಆರುಂಡಿ, ಎಚ್.ಎ.ನರಸಿಂಹಪ್ಪ ಸೇರಿದಂತೆ ಹಲವಾರು ಜನ ಮುಖಂಡರು ಇದ್ದರು.

ಎನ್.ಆಂಜನೇಯ ಸ್ವಾಗತಿಸಿದರು. ದೊಂಕತ್ತಿ ನಾಗರಾಜ್ ನಿರೂಪಿಸಿದರು. ಮುಖಂಡ ಎಂ.ಆರ್.ಮಹೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು.

# ಅಟಲ್ ಬಿಹಾರಿ ವಾಜಪೇಯಿ ದೇಶ ಕಂಡ ಅಪ್ರತಿಮ ರಾಜಕಾರಣಿ : ಸಂಸದ ಸಿದ್ದೇಶ್ವರ



ದಾವಣಗೆರೆ, ಡಿ. 25- ಸೈದ್ಧಾಂತಿಕವಾಗಿ ಬಿಜೆಪಿಯನ್ನು ಟೀಕಿಸುತ್ತಿದ್ದವರೂ ಕೂಡ ವಾಜಪೇಯಿಯವರನ್ನು ವಿರೋಧಿಸುತ್ತಿರಲಿಲ್ಲ. ಇಂತಹವರೆಲ್ಲರ ಪಾಲಿಗೆ ವಾಜಪೇಯಿ ಅಜಾತ ಶತ್ರುವಾಗಿದ್ದರು ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು


ಬಿಜೆಪಿ ಜಿಲ್ಲಾ ಘಟಕದ ವತಿಯಿಂದ ಇಂದು ಹಮ್ಮಿಕೊಳ್ಳಲಾಗಿದ್ದ ದಿ. ಅಟಲ್ ಬಿಹಾರಿ ವಾಜಪೇಯಿಯವರ 99ನೇ ಹುಟ್ಟು ಹಬ್ಬ ಕಾರ್ಯಕ್ರಮದಲ್ಲಿ ವಾಜಪೇಯಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ವಯಂ ಸೇವಕರಾಗಿ ಬಿಜೆಪಿಯ ಮೃದು ಹಿಂದುತ್ವದ ಮುಖವಾಗಿದ್ದ ವಾಜಪೇಯಿಯವರು ಈ ದೇಶ ಕಂಡ ಅಪ್ರತಿಮ ನಾಯಕ ಎಂದು ಬಣ್ಣಿಸಿದರು.

ಪ್ರಸ್ತುತ ಬಿಜೆಪಿಯ ಬೆಳವಣಿಗೆಯಲ್ಲಿ ವಾಜಪೇಯಿ ಎಂಬ ಮಹಾನ್ ನಾಯಕನ ಕೊಡುಗೆ ಸಾವಿರದಷ್ಟಿದೆ. ಪಕ್ಷ ಹೆಮ್ಮರವಾಗಿ ಬೆಳೆದು ನಿಲ್ಲಲು ವಾಜಪೇಯಿ ಅವರು ಹಾಕಿದ ಭದ್ರ ಬುನಾದಿಯೇ ಕಾರಣ ಎಂದರೆ ತಪ್ಪಾಗಲಾರದು ಎಂದರು.

ವಾಜಪೇಯಿಯವರು ಇಂದು ನಮ್ಮನ್ನೆಲ್ಲ ಬಿಟ್ಟು ದೈಹಿಕವಾಗಿ ಅಗಲಿರಬಹುದು. ಆದರೆ ಅವರ ನೆನಪುಗಳು ಪ್ರತಿಯೊಬ್ಬರಲ್ಲೂ ಅಚ್ಚಳಿಯದೇ ಉಳಿದಿವೆ, ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ಸಾಗೋಣ ಎಂದರು.

ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಮಾಜಿ ಶಾಸಕ ಎಸ್.ವಿ. ರಾಮಚಂದ್ರ, ದೂಡಾ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ಉಪಾಧ್ಯಕ್ಷ ಮಂಜಾನಾಯ್ಕ, ಪಾಲಿಕೆ ವಿರೋಧ ಪಕ್ಷದ ನಾಯಕರಾದ ಪ್ರಸನ್ನ ಕುಮಾರ್, ಮಾಜಿ ಮೇಯರ್ ಎಸ್.ಟಿ. ವೀರೇಶ್, ಹಿರಿಯ ಮುಖಂಡರಾದ ವೈ. ಮಲ್ಲೇಶ್, ಅಕ್ಕಿ ಪ್ರಭು, ಡಿ.ಸಿ.ಸಿ. ಬ್ಯಾಂಕ್ ಮಾಜಿ ನಿರ್ದೇಶಕ ನಾಗರಾಜಪ್ಪ ಕತ್ತಲಗೆರೆ ಮತ್ತು ಶೇಖರಪ್ಪ, ಶಿವನಗೌಡ ಪಾಟೀಲ್ ಮತ್ತು ಇತರರು ಇದ್ದರು.

## ನಗರದಲ್ಲಿ ಇಂದು ಶ್ರೀ ಗುರು ದತ್ತಾತ್ರೇಯ ಜಯಂತ್ಯೋತ್ಸವ



ಜಯದೇವ ವೃತ್ತದಲ್ಲಿರುವ ಶ್ರೀ ರಾಜನಹಳ್ಳಿ ಹರಿಹರಪ್ಪ ಟ್ರಸ್ಟ್ ವತಿಯಿಂದ ಶ್ರೀ ಗುರು ದತ್ತಾತ್ರೇಯ ಸ್ವಾಮಿಯ 38ನೇ ವಾರ್ಷಿಕೋತ್ಸವ, ಪ್ರತಿಷ್ಠಾಪನಾ ಸುಸ್ಮರಣ ಹಾಗೂ ಶ್ರೀ ಗೀತಾ ಜಯಂತಿ ಮತ್ತು ಶ್ರೀ ಗುರು ದತ್ತಾತ್ರೇಯ ಜಯಂತಿ ಮಹೋತ್ಸವದ ಅಂಗವಾಗಿ ಇಂದು ಹುಣ್ಣಿಮೆ ದಿನ ಶ್ರೀ ಗುರು ದತ್ತಾತ್ರೇಯ ಜಯಂತ್ಯೋತ್ಸವವನ್ನು ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 6 ಗಂಟೆಗೆ ಕಾಕಡಾರತಿ, 8 ಗಂಟೆಗೆ ಶ್ರೀ ಗಣಪತಿ, ಶ್ರೀ ವೀರಾಂಜನೇಯ ಸ್ವಾಮಿಗೆ ಪೂಜೆ ಮತ್ತು ಶ್ರೀ ದತ್ತಾತ್ರೇಯ ಮೂರ್ತಿಗೆ ಡಾ. ಜಾಧವ್ ಅವರಿಂದ ಹೂವಿನ ಅಲಂಕಾರ ಸೇವೆ ನಡೆಯುವುದು. ರುದ್ರಾಭಿಷೇಕ, 10.30 ರಿಂದ ಶ್ರೀ ಸತ್ಯದತ್ತ ವ್ರತ ಕಾರ್ಯಕ್ರಮ ನಡೆಯಲಿದೆ.

ಮಧ್ಯಾಹ್ನ 1 ಗಂಟೆಗೆ ಮಹಾಮಂಗಳಾರತಿ, ತೀರ್ಥಪ್ರಸಾದ ಮತ್ತು ಅನ್ನ ಸಂತರ್ಪಣೆಯನ್ನು ವೈಶ್ಯ ಹಾಸ್ಟೆಲ್‌ನಲ್ಲಿ ಏರ್ಪಡಿಸಲಾಗಿದೆ.


## ನಗರದಲ್ಲಿ ಇಂದು ದತ್ತಾತ್ರೇಯ ಜಯಂತಿ

ಪಿ.ಬಿ. ರಸ್ತೆಯ ಮುಂಡಾಸದ ಪುಟ್ಟಪ್ಪ ಲೇಔಟ್‌ನಲ್ಲಿರುವ ಸದ್ಗುರು ಶ್ರೀ ದತ್ತಾತ್ರೇಯ ಸೇವಾ ಸಮಿತಿ ವತಿಯಿಂದ ಸದ್ಗುರು ಶ್ರೀ ದತ್ತಾತ್ರೇಯ ಜಯಂತಿ ಕಾರ್ಯಕ್ರಮ ಇಂದು ನಡೆಯಲಿದೆ.

ಬೆಳಿಗ್ಗೆ 7 ರಿಂದ 9 ರವರೆಗೆ ಅಭಿಷೇಕ ಮತ್ತು ಮಂಗಳಾರತಿ, 9 ರಿಂದ 10.30 ರವರೆಗೆ ಭಜನೆ ಹಾಗೂ ಸಂಗೀತ ಕಾರ್ಯಕ್ರಮ ನಡೆಯುವುದು. ಬೆಳಿಗ್ಗೆ 10.30 ಕ್ಕೆ ಗುರುಗಳವರಿಂದ ಆಶೀರ್ವಚನ, ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ, ಮಹಾಪ್ರಸಾಸ ನಡೆಯುವುದು. ಶ್ರೀ ಸದ್ಗುರು ಮುರಳೀಧರ ಸ್ವಾಮೀಜಿ (ಹದಡಿ), ಯುಗಧರ್ಮ ರಾಮಣ್ಣ (ಸಿದ್ಧನಮಠ, ಚನ್ನಗಿರಿ ತಾ.), ಶ್ರೀ ಸಿದ್ದೇಶ್ (ಸಿದ್ಧನೂರು), ಶರಣೆ ಜಯದೇವಿ ತಾಯಿ ( ಮೈಸೂರು) ಇವರುಗಳಿಂದ ಆಶೀರ್ವಚನ ನಡೆಯುವುದು.

ವಿಶೇಷ ಆಹ್ವಾನಿತರು : ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ವಿನಾಯಕ ಪೈಲ್ವಾನ್, ರಾಜನಹಳ್ಳಿ ಶಿವಕುಮಾರ್, ಶ್ರೀಮತಿ ಆಶಾ ಉಮೇಶ್, ಡಿ.ಎಂ. ದೇವರಮನಿ ಶಿವರಾಜ್, ಆರ್.ಜಿ. ನಾಗೇಂದ್ರ ಪ್ರಸಾದ್, ದಿನೇಶ್ ಕೆ. ಶೆಟ್ಟಿ.

## ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು ಶಿವಾನುಭವ ಗೋಷ್ಠಿ



ಬಾಡಾ ಕ್ರಾಸ್‌ನಲ್ಲಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು ಬೆಳಿಗ್ಗೆ 11.30ಕ್ಕೆ ಗಂಟೆಗೆ 274ನೇ ಹೊಸ್ತಿಲು ಹುಣ್ಣಿಮೆ, ಶಿವಾನುಭವ ಗೋಷ್ಠಿ ಮತ್ತು ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸಾನ್ನಿಧ್ಯವನ್ನು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಶ್ರೀ ಕಲ್ಲಯ್ಯಜ್ಜ (ಶ್ರೀ ವೀರೇಶ್ವರ ಪುಣ್ಯಾಶ್ರಮ) ವಹಿಸುವರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಶಾಮನೂರು ಶಿವಶಂಕರಪ್ಪ, ಅಥಣಿ ಎಸ್. ವೀರಣ್ಣ ವಹಿಸುವರು. ಮುಖ್ಯ ಅತಿಥಿಗಳಾಗಿ ಅಣಬೇರು ರಾಜಣ್ಣ, ದೇವರಮನೆ ಶಿವಕುಮಾರ್, ಜೆ.ಎನ್. ಕರಿಬಸಪ್ಪ, ಜಿ.ಹೆಚ್. ಯಲ್ಲಪ್ಪ, ಎ.ಎಸ್. ಸಿದ್ದಲಿಂಗಸ್ವಾಮಿ ಆಗಮಿಸುವರು.

## ಕಲ್ಲೇದೇವರಪುರದಲ್ಲಿ ಇಂದು

ಜಗಳೂರು ತಾಲ್ಲೂಕು ಕಲ್ಲೇದೇವರಪುರ ಗ್ರಾಮದ ಶ್ರೀ ಕಲ್ಲೇಶ್ವರ ಸ್ವಾಮಿಯ ಕಾರ್ತಿಕ ಮತ್ತು ಹಿಟ್ಟಿನ ಹುಣ್ಣಿಮೆ ಮಹೋತ್ಸವ ಕಾರ್ಯಕ್ರಮದಲ್ಲಿ ಇಂದು ಶ್ರೀ ಕಲ್ಲೇಶ್ವರ ಸ್ವಾಮಿಯ ಹಿಟ್ಟಿನ ಹುಣ್ಣಿಮೆ ಮಹೋತ್ಸವ ನಡೆಯಲಿದೆ.

# ಶಿಕ್ಷಣ ಸಮಾಜದ ಕೀಲಿ ಕೈ : ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಲಿಂಗರಾಜ್ ಸಲಹೆ



ದಾವಣಗೆರೆ, ಡಿ. 25- ಶಿಕ್ಷಣ ಎಂಬುದು ಸಮಾಜದ ಕೀಲಿ ಕೈ ಆಗಿದ್ದು, ಎಲ್ಲಾ ಸ್ತರಗಳಲ್ಲೂ ಶಿಕ್ಷಣಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡಬೇಕು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಹೆಚ್.ಕೆ. ಲಿಂಗರಾಜ್ ಸಲಹೆ ನೀಡಿದರು.

ಬಿಇಎಹೆಚ್‌ಎಸ್ ಅಲ್ಯುಮ್ನಿ ಟ್ರಸ್ಟ್ ಇವರ ವತಿಯಿಂದ ಶಾಮನೂರಿನ ಜನತಾ ಕಾಲೋನಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ನವೀಕೃತ ಶಾಲೆಯ ಉದ್ಘಾಟನೆ ಹಾಗೂ ಪೀಠೋಪಕರಣ ವಿತರಣಾ ಸಮಾರಂಭದಲ್ಲಿ ಮಾತನಾಡಿದರು.

ಕಂಪ್ಯೂಟರ್ ಸೌಲಭ್ಯವಿರುವ ಸರ್ಕಾರಿ ಶಾಲೆಗಳಿಗೆ ಶಿಕ್ಷಕರನ್ನು ಸ್ವಯಂ ಸೇವಕರಾಗಿ ನೇಮಕ ಮಾಡಿಕೊಂಡು ಮಕ್ಕಳಿಗೆ ತಾಂತ್ರಿಕ ಶಿಕ್ಷಣ ಸೌಲಭ್ಯವು ದೊರೆಯುವಂತೆ ಮಾಡಬೇಕೆಂದು ಕರೆ ನೀಡಿದರು.

ಡಿಡಿಪಿಐ ಜಿ. ಕೊಟ್ರೇಶ್ ಮಾತನಾಡಿ, ಬಾಪೂಜಿ ಪ್ರೌಢಶಾಲೆಯ ಹಳೆಯ ವಿದ್ಯಾರ್ಥಿಗಳ ಸೇನೆ ಯುವ ಪೀಳಿಗೆಗೆ ಸ್ಫೂರ್ತಿ ಎಂದರು. ದತ್ತು ಯೋಜನೆಯಲ್ಲಿ ಸರ್ಕಾರಿ ಶಾಲೆಗಳನ್ನು ಬಲವರ್ಧನೆಗಳಿಸುವ ಕುರಿತು ಮಾಹಿತಿ ನೀಡಿದರು.

ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಡಾ. ಪುಷ್ಪಲತಾ ಅವರು, ಕರಡಿ ಕುಣಿತ ಪದ್ಯದ ಮೂಲಕ ಪರೋಪಕಾರದ ಅರ್ಥ ತಿಳಿಸಿ, ಪ್ರಾಣಿಗಳಲ್ಲಿ ಮನುಷ್ಯ ಅತಿ ಬುದ್ಧಿವಂತ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಮುಖ್ಯೋಪಾಧ್ಯಾಯ ಕೆ. ಇಮಾಂ ಮಾತನಾಡಿ, ಸೌಲಭ್ಯ ವಂಚಿತ ಶಾಲೆಗಳನ್ನು ಗುರುತಿಸಿ ಶಾಲೆಗೆ ಬೇಕಾದ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿ, ಬಾಪೂಜಿ ವಿದ್ಯಾಸಂಸ್ಥೆಯ ಕೀರ್ತಿ ಪತಾಕೆಯನ್ನು ಎಲ್ಲೆಡೆ ಹರಡುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಶಾಲಾ ನವೀಕರಣ ಮತ್ತು ಪುನಶ್ಚೇತನ ಕಾರ್ಯಕ್ರಮ ಕುರಿತು ಎಂ. ರಾಜೇಶ್ವರಿ ಅನಿಸಿಕೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಟ್ರಸ್ಟ್ ಪದಾಧಿಕಾರಿಗಳಾದ ಡಿ.ಎಸ್. ಹೇಮಂತ್, ಸಂಜಯ್ ಆರ್. ರೇವಣಕರ್ ಮತ್ತಿತರರು ಉಪಸ್ಥಿತರಿದ್ದರು.

ಪರಿಣಿತ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಪ್ರಭಾರಿ ಮುಖ್ಯ ಶಿಕ್ಷಕಿ ಸುಮಾರಾಣಿ ಸ್ವಾಗತಿಸಿದರು. ಮಾಜಿ ಮೇಯರ್, ಬಿಇಎಹೆಚ್‌ಎಸ್ ಅಲ್ಯುಮ್ನಿ ಟ್ರಸ್ಟ್ ಅಧ್ಯಕ್ಷ ಎಸ್. ಟಿ. ವೀರೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಪಿ.ಜೆ. ರಾಜಕುಮಾರ್ ವಂದಿಸಿದರು. ವಿ. ಮಮತಾ ನಿರೂಪಿಸಿದರು.

## ಮೂವರು ನಾಗರಿಕರ ಸಾವು

### ತನಿಖೆಗಾಗಿ ಸೈನಿಕ ನ್ಯಾಯಾಲಯ ರಚನೆ

ಜಮ್ಮು, ಡಿ. 25 – ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯಲ್ಲಿ ಇತ್ತೀಚೆಗೆ ಸೈನಿಕರ ಮೇಲೆ ನಡೆದ ದಾಳಿಗೆ ಸಂಬಂಧಿಸಿದಂತೆ ವಶಕ್ಕೆ ತೆಗೆದುಕೊಳ್ಳಲಾದ ಮೂವರು ನಾಗರಿಕರು ಸಾವನ್ನಪ್ಪಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸೈನಿಕ ತನಿಖಾ ನ್ಯಾಯಾಲಯ ರಚಿಸಲಾಗಿದೆ. ಪೊಲೀಸರ ಬಳಿ ದೂರು ದಾಖಲಾದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಈ ಸಂಬಂಧದ ಬೆಳವಣಿಗೆಯೊಂದರಲ್ಲಿ, ಬ್ರಿಗೇಡಿಯರ್ ಹಂತದ ಅಧಿಕಾರಿಯೊಬ್ಬರನ್ನು ವರ್ಗಾಯಿಸಲಾಗಿದೆ. 48 ರಾಷ್ಟ್ರೀಯ ರೈಫಲ್ಸ್‌ನ ಮೂವರು ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ. ಕಸ್ಟಡಿಯಲ್ಲಿ ಹಿಂಸೆ ನೀಡಲಾಗಿದೆ ಎಂದು ಆರೋಪಿಸಿರುವುದು ಹಾಗೂ ವ್ಯಾಪಕ ಆಕ್ರೋಶ ವ್ಯಕ್ತವಾಗಿರುವುದನ್ನು ಸೈನ್ಯ ಗಂಭೀರವಾಗಿ ಪರಿಗಣಿಸಿದೆ.

ಧತ್ಯಾರ್ ಮೊರ್ಹ್ ಎಂಬಲ್ಲಿ ಸೈನ್ಯದ ವಾಹನಗಳ ಮೇಲೆ ಉಗ್ರರು ಡಿಸೆಂಬರ್ 21ರಂದು ದಾಳಿ ನಡೆಸಿದ್ದರು. ದಾಳಿಯಲ್ಲಿ ಮೂವರು ಸೈನಿಕರು ಹತರಾಗಿದ್ದರು.

ನಂತರ 27ರಿಂದ 42 ವರ್ಷ ವಯಸ್ಸಿನ ಮೂವರು ನಾಗರಿಕರನ್ನು ಸೈನ್ಯ ವಿಚಾರಣೆಗಾಗಿ ವಶಕ್ಕೆ ತೆಗೆದುಕೊಂಡಿತ್ತು. ಡಿಸೆಂಬರ್ 22ರಂದು ಅವರು ಹತರಾಗಿದ್ದು ಕಂಡು ಬಂತು. ಅವರಿಗೆ ಹಿಂಸೆ ನೀಡಲಾಗಿದೆ ಎಂಬ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡಿದ್ದವು.

ಈ ನಡುವೆ ಸ್ಥಳಕ್ಕೆ ಭೇಟಿ ನೀಡಿದ ನಂತರ ಹೇಳಿಕೆ ನೀಡಿರುವ ಸೈನ್ಯದ ಮುಖ್ಯಸ್ಥ ಮನೋಜ್ ಪಾಂಡೆ, ತನಿಖೆಯನ್ನು ಅತ್ಯಂತ ವೃತ್ತಿಪರವಾಗಿ ನಡೆಸಬೇಕು ಎಂದು ತಿಳಿಸಿದ್ದಾರೆ.

# ಮಕ್ಕಳು ವಿವೇಕಾನಂದರ ಗುಣಗಳನ್ನು ಅಳವಡಿಸಿಕೊಳ್ಳಿ

### ದಾವಣಗೆರೆ ತಾಲ್ಲೂಕು ಕಸಾಪ ಕಾರ್ಯಕ್ರಮದಲ್ಲಿ ವಿಶ್ರಾಂತ ಪ್ರಾಧ್ಯಾಪಕ ಡಾ. ಎಸ್. ಶಿವಯ್ಯ ಕರೆ



ದಾವಣಗೆರೆ, ಡಿ 25- ಸ್ವಾಮಿ ವಿವೇಕಾನಂದರು ಜಗತ್ತಿಗೆ ಸಾರಿದ ಸ್ವಾವಲಂಬನೆಯ ಜೀವನ, ತ್ಯಾಗ ಮನೋಭಾವ, ಸರಳ ಜೀವನ, ಉದಾತ್ತ ಚಿಂತನೆ, ಎಲ್ಲಾ ಧರ್ಮಗಳನ್ನು ಗೌರವಿಸುವ ಮನೋಭಾವ, ಹೃದಯ ವೈಶಾಲ್ಯತೆ, ಗುರು-ಹಿರಿಯರಲ್ಲಿ ಭಕ್ತಿ ತೋರಿಸುವುದು, ನಿಸ್ವಾರ್ಥ ಮನೋಭಾವ ಹೊಂದುವುದು ಹಾಗೂ ಇಂದ್ರಿಯಗಳನ್ನು ನಿಗ್ರಹಿಸುವುದನ್ನು ಮಕ್ಕಳು ಕಲಿಯಬೇಕು ಎಂದು ವಿಶ್ರಾಂತ ಪ್ರಾಧ್ಯಾಪಕ ಡಾ. ಎಸ್. ಶಿವಯ್ಯ ತಿಳಿಸಿದರು.

ತಾಲ್ಲೂಕು ಕಸಾಪ, ಮಾಜಿ ಪುರಸಭಾ ಪ್ರೌಢಶಾಲೆ, ಹಿರಿಯ ನಾಗರಿಕರ ಸಹಾಯವಾಣಿ ಇವರ ಸಹಯೋಗದಲ್ಲಿ ಈಚೆಗೆ ನಡೆದ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ನಡೆದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು ಅವರು ಮಾತನಾಡುತ್ತಿದ್ದರು.

ನಿಮ್ಮನ್ನು ನೀವು ಜಯಿಸಿ, ಆಗ ಇಡೀ ಜಗತ್ತೇ ನಿಮ್ಮದಾಗುತ್ತದೆ, ನಿಮ್ಮನ್ನು ನಿಂದಿಸುವ ಜನರನ್ನು ಆಶೀರ್ವದಿಸಿ, ನಮ್ಮ ದುಃಖಗಳಿಗೆ ನಾವೇ ಜವಾಬ್ದಾರರು ಮತ್ತಾರೂ ಅಲ್ಲ, ಯಾವಾಗಲೂ ಒಳ್ಳೆಯದನ್ನೇ ಮಾಡಿ, ಮೊದಲು ಆಳಾಗುವುದನ್ನು ಕಲಿಯಿರಿ ಆಗ ನಾಯಕನ ಅರ್ಹತೆ ತಾನಾಗಿಯೇ ಬರುತ್ತದೆ, ಸಾಧನೆ ಇಲ್ಲದೇ ಸತ್ತರೆ ಸಾವಿಗೆ ಅವಮಾನ ಎಂಬ ಸ್ವಾಮಿ ವಿವೇಕಾನಂದರ ಸಂದೇಶಗಳನ್ನು ತುಂಬಾ ಅರ್ಥಗರ್ಭಿತವಾಗಿ ಮಕ್ಕಳಿಗೆ ತಿಳಿ ಹೇಳಿದರು. ಏಳಿ ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ ಎಂಬ ವಿವೇಕಾನಂದರ ವಾಣಿಯನ್ನು ಉಲ್ಲೇಖಿಸಿ ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

ಶಾಲಾ ಮುಖ್ಯ ಶಿಕ್ಷಕ ಆರ್. ನಾಗರಾಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಮಾರಂಭದಲ್ಲಿ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ. ದಿಳ್ಯಪ್ಪ, ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ, ಹಿರಿಯ ನಾಗರಿಕರ ಸಂಯೋಜಕ ನವೀನಕುಮಾರ್, ತಾಲ್ಲೂಕು ಕ. ಸಾ. ಪ ಗೌರವ ಕಾರ್ಯ ದರ್ಶಿ ದಾಗಿನಕಟ್ಟೆ ಪರಮೇಶ್ವರಪ್ಪ ಉಪಸ್ಥಿತರಿದ್ದರು.

ಶ್ರೀಮತಿ ಗಿರಿಜಾಬಾಯಿ ಸ್ವಾಗತಿಸಿದರು. ಶ್ರೀಮತಿ ಕೆ.ಸಿ. ವಿದ್ಯಾಬಾಯಿ ವಂದಿಸಿದರು. ಶ್ರೀಮತಿ ಚಂದ್ರಕಲಾ ಕಾರ್ಯಕ್ರಮ ನಿರೂಪಿಸಿದರು.

# ಚೀನಾ : ಷೇರು ಮೌಲ್ಯ ಕುಸಿತದ ನಂತರ ಆನ್‌ಲೈನ್ ಗೇಮ್‌ಗಳಿಗೆ ಅನುಮತಿ

ಬ್ಯಾಂಕಾಕ್, ಡಿ. 25 – ಚೀನಾ ತನ್ನಲ್ಲಿನ ಆನ್‌ಲೈನ್ ಗೇಮಿಂಗ್ ವಲಯದ ಮೇಲೆ ನಿರ್ಬಂಧ ಹೇರಿದ ನಂತರ ಭಾರೀ ನಷ್ಟ ಉಂಟಾಗಿದೆ. ಇದರ ಬೆನ್ನಲ್ಲೇ, 105 ಹೊಸ ಆನ್‌ಲೈನ್ ಆಟಗಳಿಗೆ ಅನುಮತಿ ನೀಡಲಾಗಿದೆ.

ಆನ್‌ಲೈನ್ ಗೇಮ್‌ಗಳಿಗೆ ಅನುಮತಿ ನೀಡಿರುವ ಬಗ್ಗೆ ಚೀನಾದ ಮಾಧ್ಯಮ ಹಾಗೂ ಪ್ರಕಾಶನ ಆಡಳಿತದ ಅಧಿಕೃತ ಹೇಳಿಕೆಯಲ್ಲಿ ಮಾಹಿತಿ ನೀಡಲಾಗಿದೆ.


ಆನ್‌ಲೈನ್ ಆಟದ ಮೇಲೆ ನಿರ್ಬಂಧ ಹೇರುವ ಕರಡನ್ನು ಚೀನಾ ಸರ್ಕಾರ ಪ್ರಕಟಿಸಿತ್ತು. ನಂತರ ಟೆನ್ಸೆಂಟ್ ಹಾಗೂ ನೆಟೀಸ್ ಮುಂತಾದ ವಿಡಿಯೋ ಗೇಮ್ ಉತ್ಪಾದಕರ ಷೇರುಗಳ ಮೌಲ್ಯದಲ್ಲಿ ತೀವ್ರ ಕುಸಿತ ಉಂಟಾಗಿತ್ತು. ಇದು ಚೀನಾದ ಷೇರು ಸೂಚ್ಯಂಕದ ಇಳಿಕೆಗೂ ಕಾರಣವಾಗಿತ್ತು. ಪ್ರತಿದಿನ ಲಾಗಿನ್ ಆಗುವುದಕ್ಕೆ ಇಲ್ಲವೇ ಖರೀದಿಗಳಿಗೆ ನೀಡಲಾಗುವ ಕೊಡುಗೆಗಳನ್ನು ನಿಷೇಧಿಸಲಾಗುವುದು ಎಂದು ಚೀನಾ ಸರ್ಕಾರದ ಮಾರ್ಗಸೂಚಿಗಳಲ್ಲಿ ತಿಳಿಸಲಾಗಿತ್ತು.

ಇದಾದ ನಂತರ ನೆಟೀಸ್‌ನ ಷೇರು ಮೌಲ್ಯ ನಾಸ್ಡಾಕ್‌ನಲ್ಲಿ ಶೇ.16.1ರ ಕುಸಿತ ಕಂಡಿತ್ತು. ಹಾಂಕಾಂಗ್‌ನಲ್ಲಿ ಷೇರುಗಳ ಮೌಲ್ಯ ಶೇ.25ರ ಇಳಿಕೆಯಾಗಿತ್ತು. ಟೆನ್ಸೆಂಟ್ ಷೇರು ಮೌಲ್ಯ ಶೇ.12ರಷ್ಟು ಇಳಿಕೆಯಾಗಿತ್ತು. ಒಟ್ಟಾರೆ ಕಂಪನಿಗಳ ಮಾರುಕಟ್ಟೆ ಮೌಲ್ಯ ಹಲವು ಶತಕೋಟಿ ಡಾಲರ್ ಕುಸಿದಿತ್ತು.

2023ರಲ್ಲಿ ಆನ್‌ಲೈನ್ ಗೇಮ್‌ಗಳ ಮೂಲಕ ದೇಶೀಯವಾಗಿ ದೊರೆತ ಆದಾಯ 42 ಶತಕೋಟಿ ಡಾಲರ್. ಆನ್‌ಲೈನ್ ಗೇಮ್ ಆಡುವವರ ಸಂಖ್ಯೆ 668 ದಶಲಕ್ಷಕ್ಕೆ ತಲುಪಿದೆ ಎಂದು ಚೀನಾ ತಿಳಿಸಿದೆ.

ಇತ್ತೀಚಿನ ವರ್ಷಗಳಲ್ಲಿ ಆನ್‌ಲೈನ್ ಗೇಮ್‌ಗಳ ಮೇಲೆ ಚೀನಾ ಹಲವಾರು ಕಡಿವಾಣ ಹಾಕಿದೆ. ಮಕ್ಕಳು ಪ್ರತಿದಿನ 3 ಗಂಟೆಗಿಂತ ಹೆಚ್ಚು ಕಾಲ ಗೇಮ್ ಆಡಬಾರದು ಎಂದು 2021ರಲ್ಲಿ ನಿರ್ಬಂಧಿಸಲಾಗಿತ್ತು. ನಂತರ ಎಂಟು ತಿಂಗಳ ಕಾಲ ಹೊಸ ವಿಡಿಯೋ ಗೇಮ್‌ಗಳಿಗೆ ಅನುಮತಿ ನೀಡುವುದನ್ನು ತಡೆಯಲಾಗಿತ್ತು. ಆದರೆ, ಏಪ್ರಿಲ್ 2022ರ ನಂತರ ನಿರ್ಬಂಧಗಳನ್ನು ಸಡಿಲಿಸಲಾಗಿತ್ತು.

# ವೀರಶೈವ-ಲಿಂಗಾಯತ ಸಮಾಜ ಇಬ್ಭಾಗಿಸುವ ಯತ್ನ ಸಲ್ಲದು



ದಾವಣಗೆರೆ, ಡಿ.25- ವೀರಶೈವ ಲಿಂಗಾಯತ ಸಮಾಜವು ಆತ್ಮಸಾಕ್ಷಿಯಂತೆ ನಡೆದುಕೊಳ್ಳುತ್ತಿದೆ. ಈ ಸಮಾಜವನ್ನು ಇಬ್ಭಾಗಿಸುವ ಯಾವುದೇ ಪ್ರಯತ್ನ ಮಾಡಬಾರದು ಎಂದು ಮಾಜಿ ಮುಖ್ಯಮಂತ್ರಿ, ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 24ನೇ ಮಹಾ ಅಧಿವೇಶನದ ಅಂಗವಾಗಿ ಭಾನುವಾರ ನಡೆದ ನೌಕರರ ಹಾಗೂ ಸಾಹಿತಿಗಳ ಅಧಿವೇಶನದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ನಮ್ಮ ಬಳಿ ಏನಿದೆಯೋ ಅದು ನಾಗರಿಕತೆ, ನಾವು ಏನು ಆಗಿದ್ದೇವೆಯೋ ಅದು ಸಂಸ್ಕೃತಿ. ನಮ್ಮಲ್ಲಿ ನಾಗರಿಕತೆ ಬೆಳೆದಿದೆ. ಆದರೆ ಸಂಸ್ಕೃತಿ ಬೆಳೆದಿಲ್ಲ ಎಂದು ಹೇಳಿದರು.

ವಚನಗಳಲ್ಲಿ ಬದುಕಿನ ಪಾಠವಿದೆ. ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲವಯ್ಯ ಎಂಬ ವಚನಗಳು ಬದುಕಿಗೆ ದಾರಿದೀಪ ವಾಗಿವೆ ಎಂದು ಬೊಮ್ಮಾಯಿ ತಿಳಿಸಿದರು.

ಶಾಸಕ ವಿನಯ ಕುಲಕರ್ಣಿ ಮಾತನಾಡಿ, ಸಮಾಜದ ವಿದ್ಯಾರ್ಥಿಗಳಿಗೆ ವಸತಿ ನಿಲಯದ ಸಮಸ್ಯೆ ಗಂಭೀರವಾಗಿದ್ದು, ಮಹಾಸಭಾದಿಂದಲೇ ವಸತಿ ನಿಲಯಗಳನ್ನು ನಿರ್ಮಿಸಬೇಕು. ಸಮಾಜದ ಉದ್ಯೋಗಾಕಾಂಕ್ಷಿಗಳಿಗಾಗಿ ನಿರಂತರವಾಗಿ ಉದ್ಯೋಗ ಮೇಳ ಆಯೋಜಿಸುತ್ತಿರಬೇಕು. ಜಾತಿಗಣತಿ ಬಗ್ಗೆ ಹಲವು ಗೊಂದಲಗಳು ಇರುವುದರಿಂದ ಮಹಾಸಭಾದಿಂದಲೇ ಸಮೀಕ್ಷೆ ನಡೆಸಬೇಕು. ಸಮೀಕ್ಷೆಯಲ್ಲಿ ಸಮಾಜದ ಎಲ್ಲ ಒಳಪಂಗಡಗಳು ವೀರಶೈವ ಲಿಂಗಾಯತ ಎಂದೇ ಬರೆಸಬೇಕು ಎಂದು ಸಲಹೆ ನೀಡಿದರು.

ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ. ಸೋಮಶೇಖರ್ ಮಾತನಾಡಿ, ಶರಣ ಸಾಹಿತ್ಯವು ವಿಶ್ವಭ್ರಾತೃತ್ವ, ಜಾತ್ಯತೀತತೆ, ಸ್ತ್ರೀ ಸ್ವಾತಂತ್ರ್ಯದ ಸಂದೇಶವನ್ನು ಸಾರಿದೆ. ಅಧಿಕಾರಿಗಳಿಗೆ, ರಾಜಕಾರಣಿಗಳಿಗೆ ಹೇಗೆ ಜನಪರ ಆಡಳಿತ ನಡೆಸಬೇಕು ಎಂಬ ಬಗ್ಗೆ ಕಿವಿ ಮಾತು ಹೇಳಿದೆ. ಶರಣ ಸಾಹಿತ್ಯವು ಲೋಕಕಲ್ಯಾಣದ ಸಾಹಿತ್ಯವಾಗಿದೆ ಎಂದು ಹೇಳಿದರು.

ಶಾಸಕ ಬಸವರಾಜ ರಾಯರೆಡ್ಡಿ ಮಾತನಾಡಿ, ಲಿಂಗಾಯತ ಧರ್ಮ ಹಾಗೂ ಶರಣ ಸಾಹಿತ್ಯದ ವಿಚಾರಗಳನ್ನು ಪ್ರಸ್ತುತಪಡಿಸಲು ಸಮಾಜವು ಚಿಂತನೆ ನಡೆಸಬೇಕಿದೆ ಎಂದು ಹೇಳಿದರು.

ಸತ್ಯ ನುಡಿಯುವುದೇ ಧರ್ಮವಾಗಿದೆ. ದೇವಾಲಯ ಕಟ್ಟುವ ಅವಶ್ಯಕತೆಯಿಲ್ಲ. ಮನಸ್ಸು ಶುದ್ಧವಾಗಿ ರುವುದೇ ಮುಖ್ಯ. ವಚನ ಸಾಹಿತ್ಯದಲ್ಲಿ ನಾನು ಶ್ರೇಷ್ಠ ಎಂಬ ಪದವೇ ಇಲ್ಲ. ಅಲ್ಲಿ ಹೇಗೆ ಬದುಕಬೇಕು ಎಂಬ ಅರಿವು ಇದೆ ಎಂದರು.

ಶಾಸಕ ವಿನಯ ಕುಲಕರ್ಣಿ ಮಾತನಾಡಿ, ಕೃಷಿಯಲ್ಲಿ ತೊಡಗಿರುವ ಯುವಕರಿಗೆ ಕನ್ಯೆಯೇ ಸಿಗುತ್ತಿಲ್ಲ ಇದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ ಎಂದು ಕಳವಳ ವ್ಯಕ್ತಪಡಿಸಿದರು.

ವೀರಶೈವ ಲಿಂಗಾಯತ ಸಮಾಜದ ಯುವಕರಿಗೆ ಮದುವೆಯಾಗಲು ಕನ್ಯೆ ಸಿಗುತ್ತಿಲ್ಲ. ಯುವತಿಯರು ಹಾಗೂ ಪಾಲಕರು ಸರ್ಕಾರಿ ನೌಕರಿ ಇರುವವರನ್ನೇ ಬಯಸುತ್ತಿರುವುದರಿಂದ ಯುವಕರಿಗೆ 30-35 ವಯಸ್ಸು ಕಳೆದರೂ ಮದುವೆ ಆಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಮಹಾಸಭಾದಿಂದ ಪ್ರತೀ ವರ್ಷವೂ ವಧು-ವರರ ಸಮಾವೇಶ ಆಯೋಜಿಸಬೇಕು ಎಂದು ಸಲಹೆ ನೀಡಿದರು.

ಮಹಾಸಭಾದ ಉಪಾಧ್ಯಕ್ಷ ಶಂಕರ್ ಬಿದರಿ, ಸಮಾಜದ ಮಹನೀಯರ ತ್ಯಾಗ, ದಾನ ಶ್ಲಾಘನೀಯ ಎಂದರು. ಕೆ.ವಿ.ಎಲ್. ಅಧಿಕಾರಿಗಳ ಸಂಘದ ಉಪಾಧ್ಯಕ್ಷ ರವಿ ತಿರ್ಲಾಪುರ್, ಮುಖಂಡ ಎಸ್.ಎಸ್. ಪಾಟೀಲ ಮಾತನಾಡಿದರು.

ಶಾಸಕರಾದ ಭರಮಗೌಡ ಕಾಗೆ, ಬಾಬಾ ಸಾಹೇಬ ಡಿ.ಪಾಟೀಲ, ಎಚ್.ಡಿ.ತಮ್ಮಯ್ಯ, ವಿಜಯಾನಂದ ಕಾಶಪ್ಪನವರ, ಸಾಹಿತಿ ಬಾ.ಮ.ಬಸವರಾಜಯ್ಯ, ಮುಖಂಡ ಕೆ.ಜೆ. ಶ್ರೀನಿವಾಸ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

# ನಗುವೇ ಆರೋಗ್ಯ, ನಗುತ್ತಿರಿ ಸದಾ

## ಹಿರಿಯ ಹಾಸ್ಯ ಸಾಹಿತಿ ಕೋ.ಲ. ರಂಗನಾಥರಾವ್ ಕಿವಿ ಮಾತು



ದಾವಣಗೆರೆ, ಡಿ. 25- ನಗುವೇ ನಮ್ಮ ಆರೋಗ್ಯ. ಆರೋಗ್ಯವಂತರಾಗಿ ರಲು ಸದಾ ನಗುತ್ತಿರಬೇಕು ಎಂದು ನಾಡಿನ ಹಿರಿಯ ಹಾಸ್ಯ ಸಾಹಿತಿ ಕೋ.ಲ. ರಂಗನಾಥರಾವ್ ಹೇಳಿದರು.

ಸಿಹಿ ಪ್ರಕಾಶನ (ದಾವಣಗೆರೆ) ವತಿಯಿಂದ ವನಿತಾ ಸಮಾಜದಲ್ಲಿ ಸೋಮವಾರ ಹಮ್ಮಿಕೊಳ್ಳಲಾಗಿದ್ದ 19ನೇ ವಾರ್ಷಿಕೋತ್ಸವ, ಕನ್ನಡ ರಾಜ್ಯೋತ್ಸವ ಹಾಗೂ ಸನ್ಮಾನ ಸಮಾ ರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಹಾಸ್ಯಕ್ಕೆ ನಲವತ್ತು ವರ್ಷಗಳ ಇತಿಹಾಸವಿದೆ. ನಗುವುದಕ್ಕೆ ಕಾರಣಗಳನ್ನು ಹುಡುಕಬೇಕಿಲ್ಲ. ನಮ್ಮ ಸುತ್ತಮುತ್ತ ನಡೆಯುವ ಅನೇಕ ಘಟನೆಗಳೂ ಹಾಸ್ಯ ಹುಟ್ಟಿಸುತ್ತವೆ. ನಗು ಎಂಬುದು ಅಸಹಜ ಎಂದು ಹೇಳಿದರು.

ಮನುಷ್ಯ ನಗುತ್ತಿದ್ದರೆ ಮಾತ್ರ ಜೀವನಕ್ಕೆ ಅರ್ಥ. ನಗದೇ ದುಃಖಿಯಾಗಿದ್ದರೆ ಜೀವನ ವ್ಯರ್ಥ. ಸದಾ ನಗುತ್ತಿದ್ದರೆ ರಕ್ತದ ಒತ್ತಡ ಕಡಿಮೆಯಾಗುತ್ತದೆ. ಸಕ್ಕರೆ ಕಾಯಿಲೆ ನಿಯಂತ್ರಣದಲ್ಲಿರುತ್ತದೆ. ಜೀರ್ಣ ಶಕ್ತಿ ವೃದ್ಧಿಯಾಗುತ್ತದೆ. ಅನಾರೋಗ್ಯ ಪೀಡಿತರಾಗಿ ಆಸ್ಪತ್ರೆ, ಔಷಧಿಗಳಿಗೆ ಹೆಚ್ಚು ಖರ್ಚು ಮಾಡುವ ಬದಲು ಖರ್ಚು ಇಲ್ಲದ ನಗುವಿನಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳುವಂತೆ ಸಲಹೆ ನೀಡಿದರು.

ಮತ್ತೋರ್ವ ಹಿರಿಯ ಸಾಹಿತಿ ಎಸ್.ಎಸ್.ಪಡಶೆಟ್ಟಿ ಮಾತನಾಡಿ, ಮಕ್ಕಳಿ ಗೆ ಬಾಲ್ಯಾವಸ್ಥೆಯಲ್ಲಿಯೇ ಕನ್ನಡವನ್ನು ಕಲಿಸಬೇಕು. ಕರ್ನಾಟಕದಲ್ಲಿ ಕನ್ನಡಿಗನೇ ಸಾರ್ವಭೌಮ. ಇಲ್ಲಿ ಎಲ್ಲರೂ ಕನ್ನಡವನ್ನು ಹೆಚ್ಚಾಗಿ ಮಾತನಾಡಬೇಕು. ಕನ್ನಡದಲ್ಲಿ ಪದ ದೋಷದಿಂದ ಅಪಾರ್ಥಗಳು ಆಗುವುದರಿಂದ ಕನ್ನಡವನ್ನು ಸರಿಯಾಗಿ ಬಳಕೆ ಮಾಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಹಿರಿಯ ಕವಯತ್ರಿ ಸತ್ಯಭಾಮ ಮಂಜುನಾಥ್, ಹಿರಿಯರನ್ನು ಗೌರವಿಸಿದರೆ ಮಾತ್ರ ಜೀವನದಲ್ಲಿ ಏಳಿಗೆ ಸಾಧ್ಯ. ಜೀವನದಲ್ಲಿ ಏಳುಬೀಳುಗಳನ್ನು ಕಂಡು, ಸುಖ-ದುಃಖಗಳನ್ನು ಅನುಭವಿಸಿದ ಹಿರಿಯರನ್ನು ಯುವಪೀಳಿಗೆ ಗೌರವದಿಂದ ಕಾಣಬೇಕು ಎಂದರು.

**15 ನಿಮಿಷದ ನಗು 2 ಗಂಟೆಗಳ ನಿದ್ರೆಗೆ ಸಮ. ಪ್ರತಿ ದಿನ 15 ಸೆಕೆಂಡ್ ನಗುತ್ತಿದ್ದರೆ 2 ದಿನದ ಆಯಸ್ಸು ಹೆಚ್ಚಾಗುತ್ತದೆ. ಹೀಗಾಗಿ ದಿನಕ್ಕೊಮ್ಮೆಯಾದರೂ ನಗಬೇಕು. ಪುಸ್ತಕ ಓದುವುದರಿಂದ ಹಾಗೂ ಮಾತುಗಾರಿಕೆಯಿಂದ ಹೇಗೆ ನೆನಪಿನ ಶಕ್ತಿ ಹೆಚ್ಚಾಗುತ್ತದೋ ಹಾಗೆಯೇ ನಗುವುದರಿಂದಲೂ ನೆನಪಿನ ಶಕ್ತಿ ಹೆಚ್ಚುತ್ತದೆ. ಹೃದಯ ಕಾಯಿಲೆಗೂ ನಗು ಸೂಕ್ತ ಮದ್ದು.**

**-ಕೋ.ಲ. ರಂಗನಾಥರಾವ್,**
**ಹಾಸ್ಯ ಸಾಹಿತಿ, ಬೆಂಗಳೂರು.**

ಇದೇ ಸಂದರ್ಭದಲ್ಲಿ ಹಿರಿಯ ಸಾಹಿತಿ ಮಳಲಕೆರೆ ಗುರುಮೂರ್ತಿ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಮಾತನಾಡಿದ ಅವರು, ಆತ್ಮಕ್ಕೆ ಸಂತೋಷವನ್ನುಂಟು ಮಾಡುವ ಕೆಲಸಗಳನ್ನು ಮಾಡಿದಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ ಎಂದು ಹೇಳಿದರು.

ನಾವೆಲ್ಲಾ ವಿಧಿಯ ಹಿಡಿತದಲ್ಲಿದ್ದೇವೆ. ಧೀರ, ಬಲಶಾಲಿಯಾದ ಭೀಮನೂ ವಿಧಿಯ ಪ್ರಭಾವಕ್ಕೆ ಒಳಗಾಗಿ ಬಾಣಸಿಗನಾಗಿದ್ದ. ಮನುಷ್ಯನ ಆಯುಸ್ಸು ಅತ್ಯಲ್ಪವಾದದ್ದು. ಇರುವಷ್ಟು ದಿನ ಎಲ್ಲರೊಂದಿಗೆ ಬೆರೆತು, ನಗುತ್ತಾ, ಉತ್ತಮ ನಡತೆಯಿಂದ ಬದುಕಬೇಕು. ಆಗ ಪರಮಾತ್ಮ ಮೆಚ್ಚುತ್ತಾನೆ ಎಂದು ಹಿತ ನುಡಿದರು.

ಹಿರಿಯ ಸಾಹಿತಿ ಪ್ರೊ.ಬಿ.ಬಿ.ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಉಮಾದೇವಿ ಪ್ರಾರ್ಥಿಸಿದರು. ಸಂಧ್ಯಾಸುರೇಶ್ ಸ್ವಾಗತಿಸಿದರು. ರಾಜೇಂದ್ರ ಪ್ರಸಾದ್ ನಿರೂಪಿಸಿದರು. ಸಿಹಿ ಪ್ರಕಾಶನ ಸಂಸ್ಥಾಪಕ ನೀಲಗುಂದ ರಾಜಂದ್ರ ಪ್ರಸಾದ್ ನಿರೂಪಿಸಿದರು.

## ಶ್ರೀ ಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಕಾರ್ತಿಕ ದೀಪೋತ್ಸವ



ದಾವಣಗೆರೆ,ಡಿ.25- ನಗರದ ಅಶೋಕ ಚಿತ್ರಮಂದಿರದ ಬಳಿಯ ಶ್ರೀ ಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಸೋಮವಾರ ರಾತ್ರಿ ಏರ್ಪಾಡಾಗಿದ್ದ ಕಾರ್ತಿಕ ದೀಪೋತ್ಸವವು ವಿಜೃಂಭಣೆಯಿಂದ ಜರುಗಿತು. ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಕಿರುವಾಡಿ ಗಿರಿಜಮ್ಮ ಸೇರಿದಂತೆ, ಗಣ್ಯರು ಕಾರ್ತಿಕೋತ್ಸವಕ್ಕೆ ಚಾಲನೆ ನೀಡಿದರು.

## ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಹೊಸ್ತಿಲ ಹುಣ್ಣಿಮೆ ಪೂಜೆ



ದಾವಣಗೆರೆಯ ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದಿನ ಹೊಸ್ತಿಲ ಹುಣ್ಣಿಮೆ ಪ್ರಯುಕ್ತ ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಶ್ರೀಮತಿ ಸುಮನ್ ಮತ್ತು ವಾಗೀಶ್ ಕಟ್ಟಿಗಿಹಳ್ಳಿಮಠ ಹಾಗೂ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

## ನಗರದಲ್ಲಿ ಇಂದು ಅನ್ನ ಸಂತರ್ಪಣೆ



ಶ್ರೀ ದತ್ತ ಜಯಂತಿ ಪ್ರಯುಕ್ತ ಹಾಸಬಾವಿ ವೃತ್ತದಲ್ಲಿ ಇಂದು ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಭಕ್ತಾದಿಗಳು ಆಗಮಿಸಿ ಪ್ರಸಾದ ಸ್ವೀಕರಿಸಲು ಆಯೋಜಕರು ಕೋರಿದ್ದಾರೆ.

## ಶ್ರೀಶೈಲ, ಕಾಶಿ ಜಗದ್ಗುರುಗಳ ಅಡ್ಡ ಪಲ್ಲಕ್ಕಿ ಉತ್ಸವ



ಹಾವೇರಿ, ಡಿ. 25 - ಶಿಗ್ಗಾವಿ ತಾಲ್ಲೂಕು ಬಿಸನಳ್ಳಿ ಗ್ರಾಮದ ಶ್ರೀ ಜಗದ್ಗುರು ಪಂಚಾಚಾರ್ಯ ವೇದ ಆಗಮ ಸಂಸ್ಕೃತ ಸಂಗೀತ ಮತ್ತು ಜ್ಯೋತಿಷ್ಯ ಪಾಠಶಾಲೆಯ ದಶಮಾನೋತ್ಸವದ 5ನೇ ದಿನದ ಕಾರ್ಯಕ್ರಮದಲ್ಲಿ ಶ್ರೀಮದ್ ಶ್ರೀಶೈಲ ಜಗದ್ಗುರು ಹಾಗೂ ಕಾಶಿ ಪೀಠದ ಕಿರಿಯ ಜಗದ್ಗುರುಗಳ ಅಡ್ಡ ಪಲ್ಲಕ್ಕಿ ಮಹೋತ್ಸವ ನಿನ್ನೆ ಜರುಗಿತು.

ದಾವಣಗೆರೆಯಿಂದ ಹುಬ್ಬಳ್ಳಿಗೆ ತೆರಳುವ ಮಾರ್ಗ ಮಧ್ಯೆ ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹಾಗೂ ಶ್ರೀ ಕಾಶಿ ಪೀಠದ ಜಗದ್ಗುರು ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜೇಯಂದ್ರ ಅವರನ್ನು ಜಗದ್ಗುರುಗಳು ಆಶೀರ್ವಾದಿಸಿದರು.

## ಆನಗೋಡಿನಲ್ಲಿಂದು ಮರುಳಸಿದ್ದೇಶ್ವರ ಕಾರ್ತಿಕ




ದಾವಣಗೆರೆ ಸಮೀಪದ ಆನಗೋಡಿನ ವಿಶ್ವಬಂಧು ಶ್ರೀ ಮರುಳಸಿದ್ದೇಶ್ವರ ಕಾರ್ತಿಕೋತ್ಸವ ಇಂದು ರಾತ್ರಿ 8ಕ್ಕೆ ಪೂಜಾ ವಿಧಿವಿಧಾನಗಳೊಂದಿಗೆ ನಡೆಯಲಿದೆ. ಭಕ್ತಾದಿಗಳು ಆಗಮಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ವಿಶ್ವಬಂಧು ಶ್ರೀ ಮರುಳಸಿದ್ದೇಶ್ವರ ಸಮಿತಿ ತಿಳಿಸಿದೆ.

## ಬಸವೇಶ್ವರ ಮತ್ತು ದಾನಮ್ಮ ದೇವಿ ಕಡೆ ಕಾರ್ತಿಕೋತ್ಸವ



ದಾವಣಗೆರೆ, ಡಿ. 25 - ನಗರದ ದೊಡ್ಡಪೇಟೆಯಲ್ಲಿರುವ ಶ್ರೀ ಬಸವೇಶ್ವರ ಮತ್ತು ಗುಡ್ಡಾಪುರದ ಶ್ರೀ ದಾನಮ್ಮ ದೇವಿ ದೇವಸ್ಥಾನದಲ್ಲಿ ಸೋಮವಾರ ವಿಜೃಂಭಣೆಯಿಂದ ಕಾರ್ತಿಕ ದೀಪೋತ್ಸವ ನಡೆಯಿತು. ಹಿರಿಯ ಕೈಗಾರಿಕೋದ್ಯಮಿಯೂ ಆಗಿರುವ ದೇವಸ್ಥಾನ ಸಮಿತಿ ಅಧ್ಯಕ್ಷ ಅಥಣಿ ಎಸ್. ವೀರಣ್ಣ ದೀಪೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

## ಬಿ. ಕಲಪನಹಳ್ಳಿಯಲ್ಲಿ ಇಂದು ಶರಣಬಸಪ್ಪಜ್ಜನವರ ಕಾರ್ತಿಕೋತ್ಸವ



ದಾವಣಗೆರೆ ಸಮೀಪದ ಬಿ. ಕಲಪನಹಳ್ಳಿ ಗ್ರಾಮದ ಶ್ರೀ ಶರಣ ಬಸಪ್ಪಜ್ಜನವರ ಕಾರ್ತಿಕೋತ್ಸವವು ಇಂದು ಸಂಜೆ 7.30 ಕ್ಕೆ ನಡೆಯಲಿದೆ.

## ಹಿಂಡಸಘಟ್ಟದಲ್ಲಿ ಸಂಭ್ರಮದ ತೆಪ್ಪೋತ್ಸವ



ಮಲೇಬೆನ್ನೂರು, ಡಿ. 25 - ಹಿಂಡಸಘಟ್ಟ ಗ್ರಾಮದ ಶ್ರೀ ಸಿದ್ದೇಶ್ವರ ಸ್ವಾಮಿಯ ಕಾರ್ತಿಕೋತ್ಸವದ ಅಂಗವಾಗಿ ಶನಿವಾರ ರಾತ್ರಿ ಶ್ರೀ ಸಿದ್ದೇಶ್ವರ ಹಾಗೂ ಕೊಕ್ಕನೂರು ಶ್ರೀ ಆಂಜನೇಯ ಸ್ವಾಮಿಯ ತೆಪ್ಪೋತ್ಸವವು ಗ್ರಾಮದ ಐತಿಹಾಸಿಕ ಪುಷ್ಕರಣೆಯಲ್ಲಿ ಅಪಾರ ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು.

ಕೊಕ್ಕನೂರಿನ ಶ್ರೀ ಆಂಜನೇಯ ಸ್ವಾಮಿ ಉತ್ಸವ ಮೂರ್ತಿಯನ್ನು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಕರೆ ತಂದು ಶ್ರೀ ಸಿದ್ದೇಶ್ವರ ಸ್ವಾಮಿಯ ಸಮ್ಮುಖದಲ್ಲಿ ಭಕ್ತರು ವಿಶೇಷ ಪೂಜೆ ಸಲ್ಲಿಸಿದರು.

ನಂತರ ದೇವಸ್ಥಾನದ ಬಳಿ ಭಕ್ತರು ದೀಪಗಳನ್ನು ಹಚ್ಚಿ ಕಾರ್ತಿಕೋತ್ಸವವನ್ನು ಆಚರಿಸಿದರು. ಬಳಿಕ ಕೊಕ್ಕನೂರು ಶ್ರೀ ಆಂಜನೇಯ ಹಾಗೂ ಶ್ರೀ ಸಿದ್ದೇಶ್ವರ ಸ್ವಾಮಿಯ ಉತ್ಸವ ಮೂರ್ತಿಗಳನ್ನು ಮೆರವಣಿಗೆ ಮೂಲಕ ಪುಷ್ಕರಣಿಗೆ ತರಲಾಯಿತು. ಈ ವೇಳೆ ಭಕ್ತರು ರಸ್ತೆಯುದ್ದಕ್ಕೂ ರಸ್ತೆ ಅಕ್ಕ-ಪಕ್ಕದಲ್ಲಿ ದೀಪಗಳನ್ನು ಹಚ್ಚಿ ಮೆರವಣಿಗೆಗೆ ಬೆಳಕು ಚೆಲ್ಲಿದರು. ತೆಪ್ಪದಲ್ಲಿ ಉತ್ಸವ ಮೂರ್ತಿಗಳನ್ನು ಪ್ರತಿಷ್ಠಾಪಿಸಿದ ಬಳಿಕ ನಂದಿಗುಡಿ ಬೃಹನ್ಮಠದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರು ಉತ್ಸವ ಮೂರ್ತಿಗಳಿಗೆ ಪೂಜೆ ಸಲ್ಲಿಸಿ, ತೆಪ್ಪದಲ್ಲಿ ಕುಳಿತು ತೆಪ್ಪೋತ್ಸವಕ್ಕೆ ಚಾಲನೆ ನೀಡಿದರು.

ಈ ವೇಳೆ ಭಕ್ತರು ತಮ್ಮ ಇಷ್ಟಾರ್ಥಗಳನ್ನು ಈಡೇರಿಸುವಂತೆ ಪ್ರಾರ್ಥಿಸಿ, ಅಡಿಕೆ ಹಾಳೆಯಲ್ಲಿ ತಯಾರಿಸಿದ ದೀಪಗಳನ್ನು ಹಚ್ಚಿ ಪುಷ್ಕರಣೆಯಲ್ಲಿ ತೇಲಿಬಿಟ್ಟರು.

ಭಕ್ತರು ತೇಲಿಬಿಟ್ಟ ದೀಪಗಳು ನಕ್ಷತ್ರಗಳಂತೆ ಗೋಚರಿಸಿ, ಎಲ್ಲರ ಗಮನ ಸೆಳೆದವು. ಪಟಾಕಿ ಸಿಡಿತ ಮುಗಿಲು ಮುಟ್ಟಿತು.

## ನಗರದ ಕರುಣಾ ಟ್ರಸ್ಟ್‌ನಿಂದ ಇಂದು ಸೈಕಲ್ ವಿತರಣೆ

ಎಂಸಿಸಿ ಬಿ ಬ್ಲಾಕ್‌ನ 3ನೇ ಮುಖ್ಯರಸ್ತೆಯಲ್ಲಿರುವ ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಲ್ಲಿ ಇಂದು ಸಂಜೆ 5 ಗಂಟೆಗೆ ಬಡತನ ನಿರ್ಮೂಲನೆಗಾಗಿ 75ನೇ ಸೈಕಲ್ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಕರುಣಾ ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮನೋರೋಗ ತಜ್ಞ ಡಾ. ಸುದರ್ಶನ್, ಅಗಡಿ ಮಹಾಂತೇಶ್, ಜಯಕುಮಾರ್, ಬಸವರಾಜ್ ಒಡೆಯರ್ ಉಪಸ್ಥಿತರಿರುವರು. ಡಾ. ಹೆಚ್.ಎನ್.ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸಲಿದ್ದಾರೆ.

## ನಗರದ ಶ್ರೀ ಗಡಿ ಚೌಡೇಶ್ವರಿ ದೇವಸ್ಥಾನದಲ್ಲಿ ಇಂದು ಹೊಸ್ತಿಲ ಹುಣ್ಣಿಮೆ

ಎಸ್.ಎಸ್. ಬಡಾವಣೆಯ ಶ್ರೀಮತಿ ಮತ್ತು ಶ್ರೀ ಮಾಗಾನಹಳ್ಳಿ ಗುರುಸಿದ್ದಪ್ಪ ಸಮುದಾಯ ಭವನದ ಶ್ರೀ ಗಡಿ ಚೌಡೇಶ್ವರಿ ದೇವಸ್ಥಾನದಲ್ಲಿ ಹೊಸ್ತಿಲ ಹುಣ್ಣಿಮೆಯ ಪ್ರಯುಕ್ತ ಇಂದು ವಿಶೇಷ ಪೂಜೆ ನಡೆಯಲಿದೆ.

ಶ್ರೀಮತಿ ರಾಧಮ್ಮ ಡಿ.ಎಂ. ಗುರುಪ್ರಸನ್ನ ಮತ್ತು ಕುಟುಂಬಸ್ಥರಿಂದ ಅನ್ನ ಸಂತರ್ಪಣೆ ಕಾರ್ಯಕ್ರಮವಿರುತ್ತದೆ. ಪ್ರತಿ ಹುಣ್ಣಿಮೆಯ ದಿವಸ ದೇವಿಯ ಸನ್ನಿಧಿಯಲ್ಲಿ ಅನ್ನಸಂತರ್ಪಣೆ ಕಾರ್ಯಕ್ರಮವಿರುತ್ತದೆ.

## ನಗರದ ಸಾಯಿ ಮಂದಿರದಲ್ಲಿ ಇಂದು ಶ್ರೀ ದತ್ತಾತ್ರೇಯ ಸ್ವಾಮಿಗೆ ಹೂವಿನ ಅಲಂಕಾರ



ಎಂಸಿಸಿ 'ಎ' ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಇಂದು ಶ್ರೀ ದತ್ತಾತ್ರೇಯ ಜಯಂತಿ ಮತ್ತು ಹುಣ್ಣಿಮೆಯ ಪ್ರಯುಕ್ತ ಶ್ರೀ ದತ್ತಾತ್ರೇಯ ಸ್ವಾಮಿ ಮೂರ್ತಿಗೆ ಬೆಳಿಗ್ಗೆ 8 ಗಂಟೆಗೆ ವಿಶೇಷ ಅಭಿಷೇಕ ಮತ್ತು ವಿಶೇಷ ಹೂವಿನ ಅಲಂಕಾರ ಏರ್ಪಡಿಸಲಾಗಿದೆ.

ಬೆಳಿಗ್ಗೆ 8.30 ರಿಂದ ಮಂದಿರದಲ್ಲಿ ಸೇವೆ ಮಾಡುವ ಸದಸ್ಯರಿಂದ ಶ್ರೀ ವಿಷ್ಣು ಸಹಸ್ರನಾಮ ಮತ್ತು ಭಜನೆ ಕಾರ್ಯಕ್ರಮ, ಬೆಳಿಗ್ಗೆ 10.30ಕ್ಕೆ ಸಾಯಿ ಭಜನಾಮೃತ ಸದಸ್ಯರಿಗೆ ಭಜನೆ, ಶ್ರೀ ಸಾಯಿ ಧ್ಯಾನ ಮಂದಿರದಲ್ಲಿ ಬೆಳಿಗ್ಗೆ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ಮಧ್ಯಾಹ್ನ 12 ಗಂಟೆಗೆ ಆರತಿ ಮತ್ತು ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ ಎಂದು ಸಾಯಿ ಟ್ರಸ್ಟ್‌ನ ಕಾರ್ಯದರ್ಶಿ ಎಂ. ಶಿವಪ್ಪ ತಿಳಿಸಿದ್ದಾರೆ.

## ಭಾರತ್ ಕಾಲೋನಿಯ ಚೌಡೇಶ್ವರಿ ದೇವಸ್ಥಾನದಲ್ಲಿಂದು ಕಾರ್ತಿಕೋತ್ಸವ



ದಾವಣಗೆರೆ ಭಾರತ್ ಕಾಲೋನಿಯಲ್ಲಿರುವ ಜಗಳೂರು ರೈಸ್ ಮಿಲ್ಲಿನ ಆವರಣದ ಶ್ರೀ ಕ್ಷೇತ್ರ ಮಡ್ರಳ್ಳಿ ಶ್ರೀ ಚೌಡೇಶ್ವರಿ ದೇವಿ ದೇವಸ್ಥಾನದಲ್ಲಿ ಶ್ರೀ ದೇವಿಗೆ ಮತ್ತು ಶ್ರೀ ಸುಬ್ರಮಣ್ಯ ಸ್ವಾಮಿಗೆ ಇಂದು ಬೆಳಿಗ್ಗೆ 6.30ಕ್ಕೆ ರುದ್ರಾಭಿಷೇಕ, ಹೋಮ, ಹವನ ವಿಶೇಷ ಪೂಜೆ ನಡೆಯಲಿದೆ. ಸಂಜೆ 6.30ಕ್ಕೆ ಕಡೆ ಕಾರ್ತಿಕೋತ್ಸವ ಜರುಗಲಿದೆ ಎಂದು ರೈಸ್ ಮಿಲ್ಲಿನ ಮಾಲೀಕ ಮುನಿಯಪ್ಪ ತಿಳಿಸಿದ್ದಾರೆ.

## ಚಂದನ ವಾಹಿನಿಯಲ್ಲಿ ಬಿ.ಎನ್. ಮಲ್ಲೇಶ್



ದಾವಣಗೆರೆ, ಡಿ. 25 - ದೂರದರ್ಶನ ಚಂದನ ವಾಹಿನಿಯ 'ಶುಭೋದಯ ಕರ್ನಾಟಕ' ಕಾರ್ಯಕ್ರಮದಲ್ಲಿ ನಾಡಿದ್ದು ದಿನಾಂಕ 27ರ ಬುಧವಾರ ಬೆಳಿಗ್ಗೆ 8 ರಿಂದ 9 ರವರೆಗೆ ಹಿರಿಯ ಪತ್ರಕರ್ತ, ಕವಿ ಬಿ.ಎನ್. ಮಲ್ಲೇಶ್ ಅವರ ನೇರ ಸಂದರ್ಶನ ಪ್ರಸಾರವಾಗಲಿದೆ. ಶ್ರೀಮತಿ ಸವಿ ಪ್ರಕಾಶ್ ಅವರು ಸಂದರ್ಶನ ನಡೆಸಿಕೊಡಲಿದ್ದಾರೆ.

## ಟೇಬಲ್ ಟೆನ್ನಿಸ್ ಪಂದ್ಯಾವಳಿಗೆ ಆಯ್ಕೆ



ದಾವಣಗೆರೆ, ಡಿ.25- ನಗರದ ಎ.ಜಿ.ಬಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಾದ ಬಿ. ಸಂಧ್ಯಾ, ಆರ್. ಪ್ರೇಮ, ಎ.ಪಿ. ವತ್ಸಲ ಅವರು ದಾವಣಗೆರೆ ವಿಶ್ವವಿದ್ಯಾನಿಲಯ ಟೇಬಲ್ ಟೆನ್ನೀಸ್ ಪಂದ್ಯಾವಳಿಯಲ್ಲಿ ಆಯ್ಕೆಯಾಗಿದ್ದು, ಸೌತ್ ಝೋನ್ ಚೆನ್ನೈನ ಆಮೇಠಿ ವಿಶ್ವವಿದ್ಯಾನಿಲಯದಲ್ಲಿ ನಡೆಯತ್ತಿರುವ ಪಂದ್ಯಾವಳಿಯನ್ನು ಪ್ರತಿನಿಧಿಸಿದ್ದಾರೆ.

## ಚಿತ್ರಕಲಾ ಪರಿಷತ್ತಿಗೆ ಶ್ರೀನಿವಾಸ್ ಅಧ್ಯಕ್ಷ



ದಾವಣಗೆರೆ, ಡಿ. 25- ಚಿತ್ರಕಲಾ ವಲಯದಲ್ಲಿ ಚಿತ್ರಸಂತೆ ಸಹಿತ ವಿನೂತನ ಕಾರ್ಯಗಳ ಮೂಲಕ ಗಮನ ಸೆಳೆಯುತ್ತಿರುವ ನಗರದ ಚಿತ್ರಕಲಾ ಪರಿಷತ್ತಿನ ನೂತನ ಅಧ್ಯಕ್ಷರಾಗಿ ಡಿ.ಸಿ. ಶ್ರೀನಿವಾಸ ಚಿನ್ನಿಕಟ್ಟಿ ಅವರು ಆಯ್ಕೆಯಾಗಿದ್ದಾರೆ.

ನಿನ್ನೆ ನಡೆದ ಪರಿಷತ್ತಿನ ಸಭೆಯಲ್ಲಿ ಈ ಆಯ್ಕೆ ನಡೆಯಿತು. ಕಾರ್ಯದರ್ಶಿಯಾಗಿ ಡಿ. ಶೇಷಾಚಲ ಪುನರಾಯ್ಕೆಯಾಗಿದ್ದಾರೆ. ಸಂಸ್ಥಾಪಕ ಅಧ್ಯಕ್ಷ ಸದಾನಂದ ಹೆಗಡೆ, ರವಿ ಶಾಮ್ ಹುದ್ದಾರ, ವಿಜಯ್ ಜಾಧವ್ ಸಹಿತ ಕಾರ್ಯಕಾರಿ ಮಂಡಳಿಯ ಇತರೆ ಸದಸ್ಯರು ಸಭೆಯಲ್ಲಿ ಉಪಸ್ಥಿತರಿದ್ದರು.

## ಶ್ರೀ ಮಧ್ವಾಂಜನೇಯ ಸ್ವಾಮಿ ಕಾರ್ತಿಕ ಇಂದು



ಕಡಲಬಾಳು ಕ್ಷೇತ್ರ ಶ್ರೀ ಮಧ್ವಾಂಜನೇಯ ಸ್ವಾಮಿ ಕಡೆ ಕಾರ್ತಿಕೋತ್ಸವವು ಇಂದು ಮಂಗಳವಾರ ಸಂಜೆ 6.30ಕ್ಕೆ ನಡೆಯಲಿದೆ ಎಂದು ಕಡಲಬಾಳು ಮುಖಂಡ ಹೆಚ್. ಮರುಳಸಿದ್ದೇಶ್ ತಿಳಿಸಿದ್ದಾರೆ.

## ತುಳಜಾ ಭವಾನಿ ದೇವಸ್ಥಾನದಲ್ಲಿ ಕಾರ್ತಿಕೋತ್ಸವ



ದಾವಣಗೆರೆ,ಡಿ.25- ಇಲ್ಲಿನ ಕೆಟಿಜೆ ನಗರದಲ್ಲಿರುವ ಶ್ರೀ ತುಳಜಾ ಭವಾನಿ ದೇವಸ್ಥಾನದಲ್ಲಿ ಬರುವ ಜನವರಿ 5 ರಂದು ಕಾರ್ತಿಕ ದೀಪೋತ್ಸವ ನಡೆಯಲಿದೆ. ಭಕ್ತಾದಿಗಳು ಕಾರ್ತಿಕೋತ್ಸವದಲ್ಲಿ ಭಾಗವಹಿಸುವಂತೆ ದೇವಸ್ಥಾನ ಸಮಿತಿ ವಿನಂತಿಸಿದೆ.

## ವಿಜೃಂಭಣೆಯ ಕೊಟ್ಟೂರೇಶ್ವರ ಕಾರ್ತಿಕೋತ್ಸವ



ಕೊಟ್ಟೂರು, ಡಿ. 25 - ಪಟ್ಟಣದ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ಕಾರ್ತಿಕೋತ್ಸವ ಅಸಂಖ್ಯಾತ ಭಕ್ತರ ಸಮ್ಮುಖದಲ್ಲಿ ಸೋಮವಾರ ವಿಜೃಂಭಣೆಯಿಂದ ಜರುಗಿತು.

ದೇವಸ್ಥಾನದ ಮುಂಭಾಗದ ಆವರಣದಲ್ಲಿ ಸಾಲಾಗಿ ಜೋಡಿಸಿದ್ದ ಮಣ್ಣಿನ ಪ್ರಣತಿಯಲ್ಲಿ ಸಂಜೆ 6ಗಂಟೆ ಹೊತ್ತಿಗೆ ಸ್ವಾಮೀಜಿಗಳು, ಅಧಿಕಾರಿಗಳು, ಪ್ರಮುಖರು ದೀಪ ಹಚ್ಚುವ ಮೂಲಕ ಚಾಲನೆ ನೀಡಿದರು.

ನಂತರದಲ್ಲಿ ಸ್ವಾಮಿಯ ಭಕ್ತರು ಪ್ರಣತಿಯಲ್ಲಿ ಎಣ್ಣೆ, ಬತ್ತಿ ಹಾಕಿ ಭಕ್ತಿ ಸಮರ್ಪಿಸಿದರು. ಹರಕೆ ರೂಪದಲ್ಲಿ ಭಕ್ತರು ಕೊಬ್ಬರಿ ನೀಡಿದರು. ಕಾರ್ತಿಕೋತ್ಸವಕ್ಕೆ ಕ್ರಿಯಾಮೂರ್ತಿಗಳಾದ ಶ್ರೀ ಶಿವಪ್ರಕಾಶ ಕೊಟ್ಟೂರು, ಧಾರ್ಮಿಕ ದತ್ತಿ ಇಲಾಖೆ ಎ.ಸಿ. ಗಂಗಾಧರಪ್ಪ, ದೇವಸ್ಥಾನ ಇ.ಒ. ಎಂ.ಡಿ.ಕೃಷ್ಣಪ್ಪ, ಶಾಸಕ ಕೆ. ನೇಮರಾಜ ನಾಯಕ್, ಎಂ.ಎಂ.ಜೆ. ಹರ್ಷವರ್ಧನ್, ಹಾಗೂ ಮುಖಂಡರು, ದೇವಸ್ಥಾನದ ಸಿಬ್ಬಂದಿಯವರು ಇದ್ದರು.

ಕಾರ್ತಿಕೋತ್ಸವದ ಪ್ರಯುಕ್ತ ಬೆಳಗಿನಿಂದಲೇ ಸ್ಥಳೀಯ ಹಾಗೂ ನಾನಾ ಕಡೆಗಳಿಂದ ಆಗಮಿಸಿದ್ದ ಭಕ್ತರು ಸ್ವಾಮಿ ದರ್ಶನ ಪಡೆದರು. ದೂರದ ಊರುಗಳಿಂದ ಅನೇಕ ಭಕ್ತರು ಕಾಲ್ನಡಿಗೆಯಲ್ಲಿ ಆಗಮಿಸಿದ್ದರು. ಸ್ವಾಮಿಯ ತೊಟ್ಟಿಲುಮಠ, ಗಚ್ಚಿನಮಠಗಳಲ್ಲಿಯೂ ಭಕ್ತರು ಸ್ವಾಮಿ ಆಶೀರ್ವಾದ ಪಡೆದುಕೊಂಡರು.